ಡಿಸೆಂಬರ್ 31

## ಹಿಂಗಾರಿಗಾಗಿ ಪ್ರಾರ್ಥಿಸಿರಿ!

ಬೆಳಿಗ್ಗೆ : ಮಲಾಕಿ. 1,2,3,4
ಸಂಜೆ : ಪ್ರಕ. 22

"ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ" (ಜೆಕರ್ಯ 10:1).

ಕರ್ತನು ನೀಡುವ ಐದನೆಯ ಪ್ರಾರ್ಥನಾ ಮನವಿ ಇದಾಗಿದೆ. ಪವಿತ್ರಾತ್ಮನ ಮಳೆಯಿಂದ ಉಜ್ಜೀವನ ಉಂಟಾಗುವದು. ಉಜ್ಜೀವನದಿಂದ ಪ್ರಾರ್ಥನಾವೀರರು ಎದ್ದೇಳುವರು. ಪ್ರಾರ್ಥನಾ ಅಗ್ನಿ ಹತ್ತಿ ಉರಿಯುವದು. ಆದ್ದರಿಂದಲೇ ಹಿಂಗಾರಿನಲ್ಲಿ ಮಳೆಯಾಗುವಂತೆ ಬೇಡಿಕೊಳ್ಳುವದು ಎಷ್ಟು ಅಗತ್ಯವಾದದ್ದು! ಇಂದಿನ ದಿನಗಳಲ್ಲಿ ಪವಿತ್ರಾತ್ಮನ ಮಳೆಯು ಮಹಿಮೆಯಾದ ಅದ್ಭುತಕಾರ್ಯಗಳೊಂದಿಗೆ ಅಧಿಕವಾಗಿ ಸುರಿಯುವಂತೆ ಪ್ರಾರ್ಥಿಸಿರಿ. ಆಗ ಅಪೊಸ್ತಲರ ದಿನಗಳಲ್ಲಿ ಒಂದು ಮುಂಗಾರು ಮಳೆ ಸುರಿಯಲ್ಪಟ್ಟಿತು. ಉಜ್ಜೀವನದ ನದಿ ದಡ ಮೀರಿ ಹರಿಯಿತು. ಶಿಷ್ಯರು ಪ್ರಾರ್ಥಿಸಿದಾಗ, ಅವರು ಕೂಡಿದ್ದ ಸ್ಥಳ ನಡುಗಿತು. ಸಾವಿರಾರು ಜನರು ರಕ್ಷಿಸಲ್ಪಟ್ಟರು. ಪೇತ್ರನು ಪ್ರಸಂಗಿಸುತ್ತಿದ್ದಾಗ, ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮನು ಇಳಿದುಬಂದನು (ಅ.ಕೃ.10:44).

"ಇಂದು ಅಂತ್ಯಕಾಲವಾಗಿದೆ. ಮನುಷ್ಯರ ಮೇಲೆಲ್ಲಾ, ನನ್ನ ಆತ್ಮವನ್ನು ಸುರಿಸುವೆನು" ಎಂದು ಕರ್ತನು ವಾಗ್ದಾನ ಮಾಡಿದಂತೆಯೇ, ಇಂದು ಆತನ ಆತ್ಮವನ್ನು ಸುರಿಸುತ್ತಲಿರುವನು (ಯೋವೇಲ. 2:28). ಈ ಹಿಂಗಾರಿನ ಮಳೆಗಾಗಿ ನೀವು ಆಸಕ್ತಿಯಿಂದ ಪ್ರಾರ್ಥಿಸುವಿರಾದರೆ, ಎಲೀಯನ ದಿನಗಳಲ್ಲಿನಂತೆ ಅಗ್ನಿಯನ್ನು ಸುರಿಸುವನು. ಪ್ರವಾದಿಯಾದ ಯೆಶಾಯನ ಪ್ರಾರ್ಥನೆ ಏನಾಗಿತ್ತು ಗೊತ್ತೇ? "ಒಣಗಿಡಕ್ಕೆ ಹತ್ತುವ ಕಿಚ್ಚಿನ ಪ್ರಕಾರವೂ ನೀರನ್ನು ಕುದಿಸುವ ಉರಿಯೋಪಾದಿಯಲ್ಲಿಯೂ ನೀನು ಪ್ರತ್ಯಕ್ಷನಾಗಿ ನಮ್ಮ ನಿರೀಕ್ಷೆಗೆ ಮೀರಿದ ಭಯಂಕರ ಕೃತ್ಯಗಳನ್ನು ನಡೆಸಿ ನಿನ್ನ ನಾಮ ಮಹತ್ತನ್ನು ನಿನ್ನ ಶತ್ರುಗಳಿಗೆ ತಿಳಿಯಪಡಿಸು" ಎಂಬುದೇ (ಯೆಶಾ.64:2,3). ಹಿಂಗಾರಿನ ಮಳೆಯನ್ನು ಕುರಿತ ಹಂಬಲ, ನಿರೀಕ್ಷೆಯು ನಿಮ್ಮನ್ನು ಆಸಕ್ತಿಯಿಂದ ಪ್ರಾರ್ಥಿಸುವಂತೆ ಮಾಡಲಿ. ಬಾಯಾರಿದ ಜಿಂಕೆಯು ನೀರಿನ ತೊರೆಗಾಗಿ ತವಕಿಸುವಂತೆ ಉಜ್ಜೀವನವನ್ನು ದಾಹದಿಂದ ಬಯಸಿರಿ. ಕರ್ತನು ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸುವನು (ಲೂಕ. 1:53). ದಾಹಗೊಂಡವರಿಗಾಗಿ ನದಿಗಳನ್ನು ಹರಿಸುವನು (ಯೆಶಾ. 43:21).

ದೇವಮಕ್ಕಳೇ, ಅಂತ್ಯಕಾಲಕ್ಕೆ ಬಂದಿರುವೆವು. ನೋಹನ ಕಾಲದಲ್ಲಿ ಸುರಿದ ಜಲಪ್ರಳಯದಂತೆ ಇಂದು ಕರ್ತನು ಬರುವ ಮುನ್ನ ಆಕಾಶ ತೂಬುಗಳು ತೆರೆಯಲ್ಪಟ್ಟು ಒಂದು ಮಳೆ ಸುರಿಯುವದು. ಆ ಮಳೆಯ ನಿಮಿತ್ತ ರಕ್ಷಣೆಯ ನಾವೆ ಮೇಲಕ್ಕೆ ಎತ್ತಲ್ಪಡುವದು.

*ನೆನಪಿಗೆ : ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪು ಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಹೋಶೇಯ 6:3).*




# ಅನುದಿನದ ಆಹಾರ

**ANUDHINADA AHARA - DECEMBER 2014**

ಡಿಸೆಂಬರ್- 2014

ಮರ 15 ಹಣ್ಣು 12 Tree 15 Fruit 12


## ಪ್ರಧಾನ ಬೋಧನೆಯ ನಾಲ್ಕು ಭಾಗಗಳು!

"ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ, ಪ್ರಾರ್ಥನೆಗಳನ್ನೂ, ಮನವಿಗಳನ್ನೂ, ಕೃತಜ್ಞತಾ ಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ" (1 ತಿಮೊ. 2:1).

ಅಪೊ. ಪೌಲನು ತನ್ನ ಆತ್ಮೀಕ ಕುಮಾರನಾದ ತಿಮೊಥೆಯನಿಗೆ ಎರಡು ಪತ್ರಗಳನ್ನು ಬರೆದನು. ಅವುಗಳಲ್ಲಿರುವ ಹತ್ತು ಅಧ್ಯಾಯಗಳಲ್ಲಿ ಹೇರಳವಾದ ಬುದ್ಧಿವಾದಗಳನ್ನು ಬರೆದಿರುವನು. ಅವುಗಳಲ್ಲಿ ಉತ್ತಮವಾದ ಬುದ್ಧಿಮಾತೇನೆಂದರೆ "ಎಲ್ಲಾ ಜನರಿಗಾಗಿ ದೇವರಿಗೆ ವಿಜ್ಞಾಪನೆಗಳನ್ನೂ, ಮನವಿಗಳನ್ನೂ, ಕೃತಜ್ಞತಾಸ್ತುತಿಗಳನ್ನೂ ಮಾಡಬೇಕು". ಯಾಕೆಂದರೆ ಪ್ರಾರ್ಥನೆಯೇ, ಜಯ ಪ್ರಾರ್ಥನೆಯೇ ಜೀವನ. ಪ್ರಾರ್ಥನೆಯು ಸರ್ವಲೋಕಗಳನ್ನೂ ಆಳುವ ಕರ್ತನ ಕರಗಳನ್ನು ಚಲಿಸುವಂತೆ ಮಾಡುವಂಥದ್ದು. ಬೇಸರಗೊಳ್ಳದೆ ಪ್ರಾರ್ಥನೆ ಮಾಡಿರಿ (ರೋಮಾ. 12:12). ಪ್ರಾರ್ಥನೆಯಲ್ಲಿ ಎಚ್ಚರವಾಗಿರಿ (ಲೂಕ. 21:36) ಎಂದು ಸತ್ಯವೇದ ಹೇಳುತ್ತದೆ.

ಅಪೊ. ಪೌಲನು ಪ್ರಾರ್ಥನೆಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸುತ್ತಾನೆ. 1. ವಿಜ್ಞಾಪನೆ, 2. ಪ್ರಾರ್ಥನೆ, 3. ಬಿನ್ನಹ, 4. ಸ್ತೋತ್ರ. ಈ ನಾಲ್ಕೂ ಪ್ರಾರ್ಥನೆಯಲ್ಲಿ ಕಂಡು ಬರಬೇಕು. ಸೈತಾನನು ಯಾವಾಗ್ಲೂ, ಒಬ್ಬ ವಿಶ್ವಾಸಿಯ ಪ್ರಾರ್ಥನಾ ಜೀವಿತಕ್ಕೆ ತಡೆ ಉಂಟುಮಾಡುವನು. ಒಂದು ಮೃಗ ತನ್ನ ಬೇಟೆಯನ್ನು ಹಿಡಿಯುವಾಗ ಅದರ ಕಾಲನ್ನಾಗಲಿ ಬಾಲವನ್ನಾಗಲಿ ಹಿಡಿಯುವದಿಲ್ಲ. ಅದರ ಕತ್ತನ್ನು ಮುಖ್ಯವಾಗಿ ಶ್ವಾಸನಾಳವನ್ನು ಹಿಡಿದು ಅದರ ಉಸಿರಾಟವನ್ನು ನಿಲ್ಲಿಸುತ್ತದೆ. ಒಬ್ಬ ವಿಶ್ವಾಸಿಗೆ ಪ್ರಾರ್ಥನೆ ಎಂಬುದು ಅವನ ಉಸಿರು. ಅವನು ಪ್ರಾರ್ಥಿಸದಂತೆ ತಡೆಮಾಡಿದರೆ ಅವನು ಪಾಪದಲ್ಲಿ ಬಿದ್ದು ಆತ್ಮೀಕ ಮರಣವನ್ನು ಹೊಂದುವನು. ಆದರೆ ಪ್ರಾರ್ಥಿಸುವವನನ್ನು ಬೀಳಿಸುವದು ಬಹಳ ಕಠಿಣ. ಅವನು ಯಾವಾಗ್ಲೂ ಪರಲೋಕದೊಂದಿಗೆ ಅನ್ಯೋನ್ಯತೆಯನ್ನು ಹೊಂದಿದವನಾಗಿರುವದರಿಂದ ಬಲವೂ, ಮಹಿಮೆಯೂ ಉಳ್ಳವನಾಗಿರುವನು. ಅವನು ಕರ್ತನ ಅಧಿಕಾರವನ್ನು ಉಪಯೋಗಿಸಿ ಸೈತಾನನ ತಂತ್ರಗಳನ್ನು ಕಟ್ಟಿಹಾಕುವನು. ಈಗಾಗಲೇ

ತಲೆ ಜಜ್ಜಲ್ಪಟ್ಟ ಸೈತಾನನು ವಿಶ್ವಾಸಿಯ ಪ್ರಾರ್ಥನೆಯಿಂದ ಆಗಾಗ ಜಜ್ಜಲ್ಪಡುವದರಿಂದ ಸಹಿಸಿಕೊಳ್ಳಲಾಗದ ವೇದನೆಯನ್ನು ಅನುಭವಿಸುವನು.

ಪ್ರಾರ್ಥನೆಯ ಸಮಯವೇ ನೀವು ಶುದ್ಧೀಕರಿಸಲ್ಪಡುವ ಸಮಯ ನಿಮ್ಮ ಬಲ ಹೆಚ್ಚುವ ಸಮಯ. ಪರಿಶುದ್ಧಾತ್ಮನ ಅಗ್ನಿ ಹತ್ತಿ ಉರಿಯುವ ಸಮಯ. ಆತ್ಮನ ವರಗಳು ಕಾರ್ಯ ನಿರ್ವಹಿಸುವ ಸಮಯ. ಕರ್ತನ ಬರುವಿಕೆ ಬಹು ಸಮೀಪವಾಗಿರುವದರಿಂದ ನಿಮ್ಮ ಪ್ರಾರ್ಥನಾ ವೇಳೆಯನ್ನು ಅಧಿಕಗೊಳಿಸಿ ಪ್ರಾರ್ಥನೆಯೇ ನಿಮ್ಮ ಕುಟುಂಬವನ್ನು ಮಕ್ಕಳನ್ನು ಪರಿಶುದ್ಧವಾಗಿ ಕಾಯುವಂಥದ್ದು. ನಿಮ್ಮ ಪ್ರಾರ್ಥನೆಯಿಂದಲೇ ಇತರರಿಗೆ ಒಳ್ಳೆಯದನ್ನು ಮಾಡಲು ಸಾಧ್ಯ. ಪ್ರಾರ್ಥಿಸುವ ಮನುಷ್ಯನು ಮಾತ್ರ ಎಲ್ಲಾ ಅಂಧಕಾರ ಶಕ್ತಿಗಳನ್ನು ಎದುರಿಸಿ ನಿಲ್ಲಲು ಸಾಧ್ಯ.

## 1. ವಿಜ್ಞಾಪನೆಗಳು

ಪ್ರಾರ್ಥನೆಯ ಮೊದಲ ಭಾಗ ವಿಜ್ಞಾಪನೆಗಳು. ಧೂಪವರ್ಗದಲ್ಲಿ ರಕ್ತಬೋಳಕ್ಕೆ ಸಮನಾದದ್ದು. ಕರ್ತನ ಸಮ್ಮುಖದಲ್ಲಿ ಕರುಣೆ ಸಿಗಲು, ಜಜ್ಜಿದ ಹೃದಯದಿಂದ ವಿಜ್ಞಾಪನೆ ಮಾಡಿರಿ. ನಿಮ್ಮ ಜೀವಿತದಲ್ಲಿ ಪಾಪವು ನುಸುಳಿ ಮನಸ್ಸಾಕ್ಷಿ ಬಾಧಿಸುವಾಗ ಹೃದಯವನ್ನು ಕಠಿಣ ಪಡಿಸಿಕೊಳ್ಳದೆ ಕರ್ತನ ಪಾದಗಳಲ್ಲಿ ಕುಳಿತು ಪಾಪದರಿಕೆ ಮಾಡಿರಿ. ಕಣ್ಣೀರಿನಿಂದ ಗೋಳಾಡಿರಿ. ದಾವೀದನು ಬೆತ್ಷೇಬಳೊಂದಿಗೆ ವ್ಯಭಿಚಾರವೆಸಗಿ ಅವಳ ಗಂಡನನ್ನು ಕೊಲ್ಲಿಸಿದ ಪಾಪ ಕೃತ್ಯವನ್ನು ಪ್ರವಾದಿಯಾದ ನಾತಾನನು, ಅವನಿಗೆ ತಿಳಿಸಿ ಹೇಳಿದಾಗ ದೇವರ ನ್ಯಾಯ ತೀರ್ಪು ತನ್ನ ಮೇಲೆ ಬರುವುದಕ್ಕೆ ಮೊದಲೇ ಅವನು ಕರ್ತನ ಪಾದದಲ್ಲಿ ಬಿದ್ದು ಕಣ್ಣೀರಿನಿಂದ ಪ್ರಾರ್ಥಿಸಿ, ವಿಜ್ಞಾಪಿಸಿದನು (ಕೀರ್ತನೆ 51). ವಿಜ್ಞಾಪನೆ ಎಂಬುದು ಮಾನಸಾಂತರದಿಂದ ಜಜ್ಜಲ್ಪಟ್ಟ ಹೃದಯದಿಂದ ಹೊರಡುವ ಗೋಳಾಟವಾಗಿದೆ.

## 2. ಪ್ರಾರ್ಥನೆಗಳು

ಎರಡನೆಯ ಭಾಗ, ದೃಢಮನಸ್ಸಿನಿಂದ ಹೋರಾಡಿ ಪ್ರಾರ್ಥಿಸುವ ಪ್ರಾರ್ಥನೆಯಾಗಿದೆ. ರಕ್ಷಣೆಯ ಸಂತೋಷವನ್ನು ಪಡೆದ ನಂತರ, ನೀವು ಸೈತಾನನನ್ನೂ, ಅವನ ಕಾರ್ಯಗಳನ್ನೂ ಎದುರಿಸಿ ನಿಂತು ಹೋರಾಡಿ ಜಯವನ್ನು ಗಳಿಸಲೇಬೇಕಾಗಿದೆ. ಪರಿಶುದ್ಧವಾದ ಜೀವಿತಕ್ಕಾಗಿ ಇಕ್ಕಟ್ಟುಗಳನ್ನು ಎದುರಿಸಿ ನಿಂತು ಪ್ರಾರ್ಥಿಸಿ ಜಯಗಳಿಸಿರಿ. ತನ್ನ ಅಣ್ಣನಾದ ಏಸಾವನನ್ನು ಸಂಧಿಸಲು ಭಯಗೊಂಡ ಯಾಕೋಬನು ಯಬ್ಬೋಕ್ ಹೊಳೆಯ ದಂಡೆಯಲ್ಲಿ ನಿಂತು ಕರ್ತನ ಬಳಿ "ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಹೋಗಗೊಡುವದಿಲ್ಲ" ಎಂದು ಇಡೀ ರಾತ್ರಿ ಹೋರಾಡಿ ಪ್ರಾರ್ಥಿಸಿದನು. ಕೊನೆಯಲ್ಲಿ ಕರ್ತನು "ನೀನು ದೇವರೊಂದಿಗೂ, ಮನುಷ್ಯರೊಂದಿಗೂ ಹೋರಾಡಿ ಜಯಗಳಿಸಿದೆ. ಇನ್ನು ನಿನ್ನ ಹೆಸರು ಯಾಕೋಬನೆಂದು ಕರೆಯಲ್ಪಡದೆ, ಇಸ್ರಾಯೇಲನೆಂದು ಕರೆಯಲ್ಪಡುವದು" ಎಂದು ಹೇಳಿ ಅವನನ್ನು ಆಶೀರ್ವದಿಸಿದನು.



## 3. ಬಿನ್ನಹಗಳು

ಬಿನ್ನಹಗಳೆಂದರೆ, ಸ್ವಾರ್ಥವಿಲ್ಲದೆ, ಇತರರಿಗಾಗಿ ಪ್ರಾರ್ಥಿಸುವದು, ಮನವಿಗಳನ್ನು ಸಲ್ಲಿಸುವದು, ಒಬ್ಬರ ಭಾರವನ್ನು ಒಬ್ಬರು ಹೊರುವದಾಗಿದೆ. ನಿಮ್ಮ ಪ್ರಾರ್ಥನೆ ನಿಮಗಾಗಿ ನಿಮ್ಮ ಕುಟುಂಬಗಳಿಗೆ ಮಾತ್ರವೇ ಇರದೆ, ಭಾರತದ ಎಲ್ಲಾ ಜನರಿಗಾಗಿ ರಾಷ್ಟ್ರಪತಿಗಾಗಿ, ಪ್ರಧಾನಮಂತ್ರಿಗಾಗಿ, ಮುಖ್ಯಮಂತ್ರಿಗಳಿಗಾಗಿ, ಸಚಿವರುಗಳಿಗಾಗಿ, ಅಧಿಕಾರಿಗಳಿಗಾಗಿ, ನ್ಯಾಯಾಧಿಪತಿಗಳಿಗಾಗಿ ಕರ್ತನ ಬಳಿ ಬಿನ್ನಹಗಳನ್ನು ಮಾಡಿರಿ.

ಇಂದು ನಮ್ಮ ದೇಶದಲ್ಲಿ ಎಡಗೈಗೂ ಬಲಗೈಗೂ ವ್ಯತ್ಯಾಸ ತಿಳಿಯದ ಕೋಟ್ಯಾಂತರ ಜನರಿರುವರು. ನಿಜವಾದ ದೇವರು ಯಾರು ಎಂದು ತಿಳಿಯದೆ ಪರಿತಪಿಸುತ್ತಿರುವರು. ಚಪ್ಪಲಿಯನ್ನೂ ಮೆಟ್ಟಿಕೊಳ್ಳದೆ ಪುಣ್ಯಕ್ಷೇತ್ರಗಳಿಗೆ ದೇವರನ್ನು ಹುಡುಕಿಕೊಂಡು ಅಲೆಯುತ್ತಿರುವರು. ಇಂಥವರ ರಕ್ಷಣೆಗಾಗಿ ಕರ್ತನಲ್ಲಿ ಬಿನ್ನಹಗಳನ್ನು ಸಲ್ಲಿಸಿರಿ.

## 4. ಸ್ತೋತ್ರಗಳು

ನಾಲ್ಕನೆಯ ಭಾಗ, ಕರ್ತನ ನಾಮವನ್ನು ಸ್ತುತಿಸಿ ಆತನಿಗೆ ಸ್ತೋತ್ರಗಳನ್ನು ಸಲ್ಲಿಸುವದಾಗಿದೆ. ಕರ್ತನು ಸ್ತುತಿಗೆ ಪಾತ್ರನು. ಆರಾಧನೆಗೆ ಯೋಗ್ಯನು. ಎಲ್ಲಾ ಘನ ಮಾನ ಸ್ತುತಿಸ್ತೋತ್ರಗಳಿಗೆ ಅರ್ಹನು. ಆತನು ರಾಜಾಧಿರಾಜನು, ಕರ್ತಾಧಿಕರ್ತನಾಗಿರುವನು. ಆತನ ನಾಮವನ್ನು ಸ್ತುತಿಸಿರಿ. ಆತನು ಮಾಡಿದ ಅದ್ಭುತ ಕಾರ್ಯಗಳನ್ನು ಹೇಳಿ ಆತನನ್ನು ಕೊಂಡಾಡಿರಿ. ಇಸ್ರಾಯೇಲ್ಯರಿಗೆ ವಿರೋಧವಾಗಿ ಯೆರಿಕೋ ಕೋಟೆ ನಿಂತಾಗ ಕರ್ತನ ಆಜ್ಞೆಯಂತೆ ಅವರು ಮಾಡಿದ ಕಾರ್ಯ ಕರ್ತನನ್ನು ಸ್ತುತಿಸಿ ಸ್ತೋತ್ರಮಾಡಿದ್ದು. ಅವರ ಸ್ತುತಿ ಯೆರಿಕೋ ಗೋಡೆಯನ್ನು ಕೆಡವಿಹಾಕಿತು. ಇಂದು ನಿಮ್ಮ ಜೀವಿತದಲ್ಲಿ ಯೆರಿಕೋ ಗೋಡೆಯಂಥ ಯಾವದೇ ತಡೆ, ಸಮಸ್ಯೆಗಳಿದ್ದರೂ ಸಮಸ್ಯೆಯ ಕಡೆಗೆ ನೋಡದೆ ಕರ್ತನನ್ನು ಸ್ತುತಿಸುವಾಗ ಆ ಸಮಸ್ಯೆಗಳು ಮಂಜಿನಂತೆ ಕರಗಿ ಮಾಯವಾಗುವದು.

ದೇವಜನರೇ, ನಿಮ್ಮ ಜೀವಿತದಲ್ಲಿ ಪ್ರಾರ್ಥನೆಗೆ ಮೊದಲ ಸ್ಥಾನ ಕೊಡಿರಿ. ನಿಮ್ಮ ಪ್ರಯತ್ನಕ್ಕೆ ಮೊದಲು ಎಲ್ಲಾ ಕಾರ್ಯಗಳನ್ನು ಕರ್ತನ ಪಾದದಲ್ಲಿಟ್ಟು ಪ್ರಾರ್ಥಿಸಿರಿ. ಜಯ ನಿಮ್ಮದಾಗುವದು. ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ ಮಾತ್ರವಲ್ಲ, ಎಲ್ಲರಿಗಾಗಿ ವಿಜ್ಞಾಪನೆಗಳನ್ನೂ, ಪ್ರಾರ್ಥನೆಗಳನ್ನೂ, ಬಿನ್ನಹಗಳನ್ನೂ ಸ್ತುತಿಸ್ತೋತ್ರಗಳನ್ನೂ ಕರ್ತನಿಗೆ ಸಲ್ಲಿಸಿರಿ.

**ವಾಗ್ದಾನ ವಚನ** – ಯೆಶಾಯ 49:16

"ಇಗೋ, ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ
ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ"

## ಎಲ್ಲಿಟ್ಟರೂ

ನಾಸ್ತಿಕರ ಸಮ್ಮೇಳನ ನಡೆಯುತ್ತಿದ್ದಾಗ, ತಾವು ಬರೆದಿದ್ದಂತ ಬೇರೆ ಬೇರೆ ಪುಸ್ತಕಗಳನ್ನು, ಸಂಶೋಧನಾ ಕೃತಿಗಳನ್ನೂ, ದೇವರೇ ಇಲ್ಲ ಎಂದು ನಿರಾಕರಿಸುವಂತ ತತ್ವ, ಕೃತಿಗಳನ್ನೂ ತೆಗೆದುಕೊಂಡು ಹೋಗಿ ಪ್ರದರ್ಶಿಸಿದರು. ಇದೆಲ್ಲವನ್ನೂ ಗಮನಿಸುತ್ತಿದ್ದ ಒಬ್ಬ ಭಕ್ತನು ಎಲ್ಲರೂ ತಮ್ಮ ಪುಸ್ತಕಗಳನ್ನಿಟ್ಟ ನಂತರ ತಾವು ಹೋಗಿ ಉತ್ತಮವಾದ ಉನ್ನತವಾದ ಕೃತಿ ಎಲ್ಲಕ್ಕಿಂತಲೂ ಉತ್ತಮವಾದದು ಎಂದು ಹೇಳಿದರು.

ನಾಸ್ತಿಕರಲ್ಲಿ ಒಬ್ಬಾತನಿಗೆ ಇದನ್ನು ಸಹಿಸಲಾಗಲಿಲ್ಲ. ಸತ್ಯವೇದವನ್ನು ತೆಗೆದು ಎಲ್ಲಾ ಪುಸ್ತಕಕ್ಕೂ ಕೆಳಭಾಗದಲ್ಲಿಟ್ಟನು, ಆ ಭಕ್ತನು ಕೋಪಿಸಿಕೊಳ್ಳದೆ "ಸತ್ಯವೇದವೇ ಉನ್ನತವಾದ ಮೇಲಾದ ಪುಸ್ತಕವೆಂದು ಹೇಳಿದ. ಆದರೆ ಆ ಸಹೋದರರು ಸತ್ಯವೇದವು ಬೇರೆ ಎಲ್ಲಾ ಪುಸ್ತಕಗಳಿಗೂ ಆಧಾರವಾದದು ಎಂದು ತಿಳಿಸುವದಕ್ಕಾಗಿ ಬೇರೆಲ್ಲಾ ಪುಸ್ತಕಗಳಿಗೂ ಕೆಳಗೆ ಇಟ್ಟಿದ್ದಾರೆ" ಎಂದರು.

ಇದರಿಂದ ನಾಚಿಕೆಗೊಂಡ ಆ ನಾಸ್ತಿಕನು, ಸತ್ಯವೇದವನ್ನು ತೆಗೆದು ಪುಸ್ತಕಗಳ ಮಧ್ಯದಲ್ಲಿರಿಸಿದರು. ಭಕ್ತನು ನಗುತ್ತಾ ಹೀಗಂದರು "ಸತ್ಯವೇದವು ಪ್ರಧಾನ ಮುದ್ರಣಾಲಯದಂತಿದೆ. ಸತ್ಯವೇದವು ಪ್ರಪಂಚವನ್ನೇ ನಿಯಂತ್ರಿಸುವಂತದ್ದಾಗಿದೆ. ಎಲ್ಲಕ್ಕೂ ಮೂಲಾಧಾರ ಸತ್ಯವೇದವೇ" ಎಂದರು. ದೇವಮಗುವೇ, ಆ ಸತ್ಯವೇದವು ಆದ್ಯಪುಸ್ತಕವಾಗಿಯೂ, ಮೂಲೋದ್ದೇಶ ವುಳ್ಳದ್ದಾಗಿಯೂ, ಅಸ್ತಿವಾರವಾಗಿಯೂ ನಿನ್ನ ಜೀವಿತದಲ್ಲಿ ಪಾತ್ರವಹಿಸಿದೆಯಾ? ಕರ್ತನ ಧರ್ಮಶಾಸ್ತ್ರವು ಲೋಪವಿಲ್ಲದ್ದು, ಅದು ಪ್ರಾಣವನ್ನು ಉಜ್ಜೀವಿಸುವಂತದ್ದು.

## ನಿಮ್ಮ ಮಕ್ಕಳ ಆಶೀರ್ವಾದಕ್ಕಾಗಿ

♦ ನನ್ನ ಮಕ್ಕಳೆಲ್ಲರೂ ಯೆಹೋವನಿಂದ ಶಿಕ್ಷಿತರಾಗಿರುವರು. ಅವರಿಗೆ ಅಧಿಕ ಸುಕ್ಷೇಮವಾಗುವದು. ಯೆಶಾ. 54:13.

♦ ನನ್ನ ಮಕ್ಕಳು ಸತ್ಯವನ್ನನುಸರಿಸಿ ನಡೆಯುವವರಾಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ. 3 ಯೋಹಾ. 4.

♦ ನನ್ನ ಸಂಗಡ ಊಟದ ಮಣೆಯ ಸುತ್ತಲೂ ಕೂತುಕೊಳ್ಳುವ ನನ್ನ ಮಕ್ಕಳು ಎಣ್ಣೇಮರದ ಸಸಿಗಳಂತಿರುವರು. ಕೀರ್ತನೆ 128:3.

♦ ಯೌವನಸ್ಥರಾದ ನನ್ನ ಗಂಡುಮಕ್ಕಳು ಹೊರವಾಗಿ ಬೆಳೆದಿರುವ ಸಸಿಗಳಂತಿರುವರು; ಹೆಣ್ಣುಮಕ್ಕಳು ಅರಮನೆಯಲ್ಲಿರುವ ವಿಚಿತ್ರವಾಗಿ ಕೆತ್ತಿರುವ ಮೂಲೆಗಂಬದಂತಿರುವರು. ಕೀರ್ತನೆ 144:12.

♦ ನನ್ನ ಮಕ್ಕಳು ಯೋಬನಂತೆ ದೇವರಲ್ಲಿ ಭಕ್ತಿಯುಳ್ಳವರೂ, ಕೆಟ್ಟದ್ದನ್ನು ನಿರಾಕರಿಸಿ ನಿರ್ದೋಷಿಗಳಾಗಿರುವರು. ಯೋಬ. 1:1.



## ಬೇತ್ಲೆಹೇಮ್

ಯೇಸುಕ್ರಿಸ್ತನು ಜನಿಸಿದ ಊರಾದ ಬೇತ್ಲೆಹೇಮ್, ಯೂದಾಯದ ಬಹು ಸಮೃದ್ಧಿಕರವಾದ ಗ್ರಾಮಗಳಲ್ಲಿ ಇದು ಒಂದು. ಈ ಗ್ರಾಮದಲ್ಲಿ ವ್ಯವಸಾಯದ ಭೂಮಿಯೇ ಹೆಚ್ಚು. ಇಲ್ಲಿಯ ನೆಲದಲ್ಲಿ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಆದ್ದರಿಂದಲೇ ಇದಕ್ಕೆ ಬೇತ್ಲೆಹೇಮ್ ಎಂಬ ಹೆಸರು ಬಂದಿದೆ. ಬೇತ್ಲೆಹೇಮ್ ಎಂದರೆ "ರೊಟ್ಟಿಯ ಮನೆ" ಎಂದು ಅರ್ಥ. ರೂತರ ಚರಿತ್ರೆಯಲ್ಲಿ ನಾವು ನೋಡುವ ಬೋವಜನು ಈ ಸ್ಥಳದಲ್ಲೇ ವಾಸಿಸುತ್ತಿದ್ದನು. ಈ ಊರಿನಲ್ಲೇ ರೂತಳು ತನ್ನ ಅತ್ತೆಯೊಂದಿಗೆ ವಾಸವಾಗಿದ್ದು, ಹೊಲದಲ್ಲಿ ತೆನೆಗಳನ್ನು ಆರಿಸುತ್ತಿದ್ದಳು. ಆ ದಿನಗಳಲ್ಲಿ ಬೇತ್ಲೆಹೇಮಿನಲ್ಲಿ ಮನೆಗಳಿದ್ದಾಗ್ಯೂ, ಸಾಕಷ್ಟು ಸೌಕರ್ಯಗಳಿಲ್ಲದ ಮನೆಗಳು, ಸುತ್ತಲೂ ಕಟ್ಟಡಗಳೂ ಮಧ್ಯದಲ್ಲಿನ ಖಾಲಿ ಸ್ಥಳವೇ ಬೇತ್ಲೆಹೇಮ್ ಛತ್ರ. ಈ ಊರಿನ ಬೀದಿಗಳ ಬದಿಗಳಲ್ಲಿ ಚಿಕ್ಕ ಚಿಕ್ಕ ಗುಡ್ಡಗಳಲ್ಲಿ ಚಿಕ್ಕ ಗುಹೆಗಳನ್ನು ಮಾಡಿಕೊಂಡು ಅವುಗಳಲ್ಲಿ ಕುರಿ ದನಗಳನ್ನು ಕೂಡಿಡಲು ಉಪಯೋಗಿಸುತ್ತಾರೆ. ಯೋಸೇಫನಿಗೆ ಸಿಕ್ಕಿದ್ದು ಅಂಥ ಒಂದು ದನಗಳನ್ನು ಕೂಡಿಡುವ ಒಂದು ಗುಹೆ. ಇಲ್ಲಿಯೇ ಲೋಕ ರಕ್ಷಕನಾದ ಯೇಸುಕ್ರಿಸ್ತನು ಜನಿಸಿದನು. ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು (ಲೂಕ. 2:7).

## ಪ್ರಾರ್ಥನೆಯನ್ನು ಕುರಿತು ಅಮೂಲ್ಯ ನುಡಿಗಳು

* ಪ್ರಾರ್ಥನೆಯ ರಹಸ್ಯವು, ರಹಸ್ಯವಾಗಿ ಪ್ರಾರ್ಥಿಸುವದೇ ಆಗಿದೆ.
* ಪ್ರಾರ್ಥಿಸುವವನ ಜೀವಿತದಲ್ಲಿ ಅದ್ಭುತಗಳು ಅನೇಕವಾಗಿರುವವು.
* ಪ್ರಾರ್ಥನೆ ಇಲ್ಲದ ಜೀವಿತ ಜಯವಿಲ್ಲದ ಜೀವಿತ.
* ಪ್ರಾರ್ಥನೆ ಎಂಬುದು ನಮ್ಮ ಹೃದಯದ ಆಕ್ರಂದನ.
* ಕತ್ತಲೆಯಲ್ಲಿ ಪ್ರಾರ್ಥಿಸಿರಿ, ಕಾರಿರುಳು ರಾಗ ಹಾಡುವದು. ಅದು ಮಧ್ಯರಾತ್ರಿಯ ಸಂಗೀತವಾಗುವದು.
* ಪ್ರಾರ್ಥನೆಯು ಪ್ರತಿಭೆಯನ್ನು ತೋರಿಸುವದಕ್ಕಲ್ಲ; ಕರ್ತನೊಂದಿಗಿನ ಐಕ್ಯವನ್ನು ತೋರಿಸುವುದಕ್ಕೆ.
* ಪ್ರಾರ್ಥನೆಯಲ್ಲಿ ನಾವು ತಪ್ಪಿದರೆ, ಎಲ್ಲವುಗಳಲ್ಲಿಯೂ ತಪ್ಪುವೆವು.
* ವ್ಯಾಪಾರಿಗೆ ಬಂಡವಾಳ ಅವಶ್ಯ, ವಿಶ್ವಾಸಿಗೆ ಪ್ರಾರ್ಥನೆ ಬಹಳ ಅವಶ್ಯ.
* ಪ್ರಾರ್ಥನಾ ಜೀವಿತವಿಲ್ಲದಿದ್ದರೆ ಪ್ರಪಂಚದಲ್ಲಿ ಇದ್ದೂ ಇಲ್ಲದಂತೆ.
* ಹಣಕ್ಕಿರುವ ಪ್ರಾಧಾನ್ಯತೆ ಇಂದು ಪ್ರಾರ್ಥನೆಗೆ ಇಲ್ಲದಿರುವದೇ ಇಂದಿನ ಉಜ್ಜೀವನದ ದೊಡ್ಡ ತಡೆ.

## ಪರಲೋಕದ ನಿವಾಸಗಳು

ಒಬ್ಬ ಐಶ್ವರ್ಯವಂತಳಾದ ಸಹೋದರಿಗೆ ಒಮ್ಮೆ ಪರಲೋಕದ ನಿವಾಸಗಳನ್ನು ನೋಡಬೇಕೆಂಬ ಆಕಾಂಕ್ಷೆ ಉಂಟಾಯಿತು. ಅವಳ ಬಯಕೆಯನ್ನು ತಿಳಿದ ದೇವದೂತನು ದರ್ಶನದ ಮೂಲಕವಾಗಿ ಅವಳನ್ನು ಪರಲೋಕದ ನಿವಾಸಗಳಿಗೆ ಕರೆದುಕೊಂಡು ಹೋದನು. ಅಲ್ಲಿ ಬೆಳ್ಳಿ, ಬಂಗಾರ ರತ್ನಗಳ ಪ್ರಕಾಶದಂತೆ ಹೊಳೆಯುತ್ತಿದ್ದ ಬೀದಿಗಳು, ಕಣ್ಣುಗಳನ್ನು ಸೆಳೆಯುವ ಸುಂದರವಾದ ನಿವಾಸಗಳನ್ನು ಕಂಡು ಭ್ರಮಿಸಿಹೋದಳು.

ಒಂದೊಂದು ನಿವಾಸಗಳನ್ನೂ ಆ ದೇವದೂತನು ತೋರಿಸಿ ಇದು ಇಂಥಾ ಭಕ್ತನಿಗೆ, ಇದು ಇಂಥಾ ಸೇವಕನಿಗೆ, ಇದು ಇಂಥಾ ದೇವ ಮಗನಿಗಾಗಿ ಎಂದು ವಿವರಿಸುತ್ತಾ ಬಂದನು. ಮುಂದೆ ಮುಂದೆ ಹೋಗುತ್ತಾ ಒಂದು ದೊಡ್ಡ ಬಿಳಿಯ ನಿವಾಸವನ್ನು ತೋರಿಸಿ, ಇದು ನಿನ್ನ ಕೆಲಸದವಳಿಗೆ ಅಂದನು. ಆ ಐಶ್ವರ್ಯವಂತಳು ತನ್ನೊಳಗೆ ನನ್ನ ಕೆಲಸದವಳಿಗೆ ಇಷ್ಟು ದೊಡ್ಡ ನಿವಾಸವಿರುವದಾದರೆ ನನಗೆ ಇದಕ್ಕಿಂತ ದೊಡ್ಡ ನಿವಾಸ ಇರುತ್ತದೆ ಎಂದು ಯೋಚಿಸಿದಳು. ಅಯ್ಯೋ, ದೇವದೂತನು ಅವಳ ನಿವಾಸವನ್ನು ತೋರಿಸಿದಾಗ, ಅದು ಬಹಳ ಚಿಕ್ಕದಾಗಿ, ಬಗ್ಗಿ ಹೋದರೆ ಮಾತ್ರ ಒಳಗೆ ಹೋಗಲು ಸಾಧ್ಯ ಎಂಬಂತೆ ಇತ್ತು. ಅದನ್ನು ನೋಡಿದ ಅವಳ ದುಃಖ ವರ್ಣಿಸಲಸಾಧ್ಯವಾಗಿತ್ತು.

ಆಗ ದೇವದೂತನು, ನಿವಾಸಗಳನ್ನು ನಾವು ಹೇಗೆ ಕಟ್ಟುವೆವು ಗೊತ್ತೇ? ಭೂಮಿಯಲ್ಲಿ ನೀವು ಸೇವೆಗಾಗಿ ವಿನಿಯೋಗಿಸುವ ನಿಮ್ಮ ಹಣದ ಮೊತ್ತದಿಂದಲೂ, ನೀವು ದೇವರ ರಾಜ್ಯಕ್ಕಾಗಿ ಪಡುವ ಪ್ರಯಾಸದ ಮೊತ್ತದಿಂದಲೂ ದೇವರೊಂದಿಗಿನ ಅನ್ಯೋನ್ಯತೆಯ ಆಧಾರದ ಮೇಲೆ ಈ ನಿವಾಸಗಳನ್ನು ಕಟ್ಟುತ್ತೇವೆ. ನಿಮ್ಮ ಪರವಾಗಿ ಭೂಮಿಯಿಂದ ಬಂದದ್ದು ಸ್ವಲ್ಪವೇ. ಅದನ್ನು ಉಪಯೋಗಿಸಿ ಅದಕ್ಕೆ ತಕ್ಕಂಥ ನಿವಾಸವನ್ನು ಕಟ್ಟಲ್ಪಟ್ಟಿದೆ ಎಂದನಂತೆ.

### ದೇವಮಗುವೇ, ನಿನ್ನ ಪ್ರಾರ್ಥನೆಯು

* ದೇವರೊಂದಿಗೆ ನಿನ್ನನ್ನು ಒಂದುಗೂಡಿಸುವುದು. ದಾನಿ. 9:23
* ನಿನ್ನ ಅಗತ್ಯತೆಗಳನ್ನು ಪೂರೈಸುವದು. ಫಿಲಿ. 4:6,7
* ದೇವರನ್ನು ನಿನ್ನ ಕಡೆಗೆ ತಿರುಗಿಸುವದು. 1 ಅರಸು 18:36–39
* ಮಹಿಮೆಯಾದ ಪ್ರತಿಫಲವನ್ನು ಕೊಡುವದು. ಯೋಹಾ. 14:13



## ನಂಬಿಕೆ ಉಳ್ಳವರಾಗಿರ್ರಿ!

ಒಮ್ಮೆ ಕುರುಡನಾದ ಒಬ್ಬ ಭಿಕ್ಷುಕನನ್ನು ಒಬ್ಬ ದೇವಸೇವಕರು ಹೆಸರು ಹಿಡಿದು ಕರೆದು, ಕರ್ತನು ನಿನ್ನ ಕಣ್ಣನ್ನು ತೆರೆಯುವನು ಎಂದು ಹೇಳಿದರು. ಆ ಭಿಕ್ಷಕನು ತಡವರಿಸುತ್ತಾ ಮುಂದಕ್ಕೆ ಬಂದು "ಅಯ್ಯಾ ನೀವು ನನ್ನ ಹೆಸರು ಹಿಡಿದು ಕರೆದು ಯೇಸುಕ್ರಿಸ್ತನು ನಿನ್ನ ಕಣ್ಣನ್ನು ತೆರೆಯುತ್ತಿರುವನು" ಎಂದು ಹೇಳಿದಿರಿ. ಆದರೆ ನನ್ನ ಕಣ್ಣುಗಳಿಗೆ ದೃಷ್ಟಿ ಬರಲಿಲ್ಲವಲ್ಲಾ? ಎಂದು ಹೇಳಿದನು. ಆ ಸೇವಕರು ಅವನನ್ನು ನೋಡಿ ಕರ್ತನು ಹೇಳಿದ ಮೇಲೆ ನಿಶ್ಚಯವಾಗಿ ಅದನ್ನು ನೆರವೇರಿಸುವನು. ಆದ್ದರಿಂದ ನೀನು ಯಾವಾಗಲೂ ಯೇಸುಕ್ರಿಸ್ತನನ್ನೇ ದೃಷ್ಟಿಸಿ, ದೇವರೇ ನಿನ್ನ ಬಾಸುಂಡೆಗಳಿಂದ ಗುಣವಾದೆನು ಎಂದು ಹೇಳುತ್ತಲೇ ಇರು. ಆತನಿಗೆ ಸ್ತುತಿ ಸಲ್ಲಿಸು ಎಂದು ಹೇಳಿದರು.

ಅವನು ಆ ಮಾತುಗಳನ್ನು ಹಾಗೆಯೇ ಅಂಗೀಕರಿಸಿಕೊಂಡನು. ಆದರೆ ಅವನ ಕುರುಡುತನ ಹಾಗೆಯೇ ಇತ್ತು. ತಡವರಿಸುತ್ತಲೇ ಹಿಂದಿರುಗಿದನು. ಆದರೆ ಅವನು ಆಗಿನಿಂದಲೂ ನಿನ್ನ ಬಾಸುಂಡೆಗಳಿಂದ ನಾನು ಗುಣವಾದೆ ನಿನಗೆ ಸ್ತೋತ್ರ ಎಂದು ಕರ್ತನನ್ನು ಸ್ತುತಿಸಲಾರಂಭಿಸಿದನು. ಹಾಗೆ ಹೇಳಿದಂತೆಲ್ಲಾ ಅವನೊಳಗೆ ನಂಬಿಕೆ ಹೆಚ್ಚುತ್ತಾ ಹೋಯಿತು. ಮಾರನೆಯ ದಿನ ಅವನ ಕಣ್ಣುಗಳಿಗೆ ದೃಷ್ಟಿ ಬಂದಿತು. ಕರ್ತನಿಗೆ ಕೃತಜ್ಞತೆಯನ್ನು ಸಲ್ಲಿಸಿದನು.

ಕರ್ತನು ವಾಗ್ದಾನಗಳನ್ನು ನಾವು ಎಷ್ಟೆಷ್ಟು ಅರಿಕೆ ಮಾಡುತ್ತೇವೋ ಅಷ್ಟಷ್ಟು ನಂಬಿಕೆ ನಮ್ಮಲ್ಲಿ ಹೆಚ್ಚುವುದು. ದೇವರ ಮಹಿಮೆಯೂ ನಮ್ಮಲ್ಲಿ ಪ್ರಕಟಗೊಳ್ಳುವದು.

## ದೇವರನ್ನು ಸ್ತುತಿಸಲು ಕಾರಣಗಳು

1 ದೇವರು ಸ್ತುತಿ ಸ್ತೋತ್ರಗಳಿಗೆ ಯೋಗ್ಯನು
2 ದೇವರು ಪರಿಶುದ್ಧನು
3 ದೇವರು ನೀತಿವಂತನು
4 ದೇವರು ಪ್ರೀತಿ ಸ್ವರೂಪನು
5 ದೇವರು ಕರುಣಾಮಯಿ
6 ದೇವರು ಕೃಪಾಪೂರ್ಣನು
7 ದೇವರು ಸೃಷ್ಟಿಕರ್ತನು
8 ದೇವರು ದೀರ್ಘಶಾಂತನು
9 ದೇವರು ನಮ್ಮ ಕುರುಬನು
10 ದೇವರು ಘನ ವೈದ್ಯನು

# ನಮ್ಮ ದೇಶದ ಸುದ್ದಿಗಳು
## (INDIAN NEWS)

### 1. "ಭಾರತದಲ್ಲಿ ತಯಾರಿಸಿ"ಗೆ ಆಹ್ವಾನ :

ಎನ್‌ಡಿಎ ಸರ್ಕಾರದ "ಭಾರತದಲ್ಲಿ ತಯಾರಿಸು" ಯೋಜನೆಯಲ್ಲಿ ಕೈಜೋಡಿಸುವಂತೆ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರು ನಾರ್ವೆಯ ಹೂಡಿಕೆದಾರರು ಮತ್ತು ಸಾಹಸೋದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ. ಇದರ ಕುರಿತಾಗಿ ನಡೆದ ಮಾತುಕತೆಯ ವೇಳೆಯಲ್ಲಿ ಭಾರತದಲ್ಲಿನ ನಾರ್ವೆ ಕಂಪನಿಗಳಲ್ಲಿ ಹೂಡಿಕೆ ಮಾಡುವವರಿಗೆ ನೆರವು ನೀಡುವದಾಗಿ ಅಲ್ಲಿನ ಸರ್ಕಾರ ಭರವಸೆ ನೀಡಿದೆ.

### 2. ಪಾಕ್‌ನ ವಿಷಯಾಂತರ ತಂತ್ರಕ್ಕೆ ಭಾರತ ಟೀಕೆ :

ಕಾಶ್ಮೀರವೂ ಸೇರಿ ಎಲ್ಲಾ ವಿವಾದಿತ ವಿಚಾರಗಳ ಬಗ್ಗೆ ಪಾಕ್‌ನೊಡನೆ ಗಂಭೀರ ಚರ್ಚೆ ನಡೆಸಲು ತಾನು ಬಯಸಿದ್ದು ಆದರೆ ಪಾಕಿಸ್ತಾನವು ವಿಶ್ವಸಂಸ್ಥೆಗೆ ದೂರು ಸಲ್ಲಿಸುವ ಮೂಲಕ ವಿಷಯಾಂತರದ ತಂತ್ರ ಅನುಸರಿಸಿ ಮಾತುಕತೆಗೆ ನಿರಾಸಕ್ತಿ ತೋರುತ್ತಿದೆ ಎಂದು ಭಾರತ ಆರೋಪಿಸಿದೆ.

### 3. ಲಿಂಗ ತಾರತಮ್ಯ : ಭಾರತಕ್ಕೆ 114ನೇ ಸ್ಥಾನ :

ಲಿಂಗ ತಾರತಮ್ಯ ಹೋಗಲಾಡಿಸುವಲ್ಲಿ ಭಾರತ ಹಿಂದೆ ಬಿದ್ದಿದೆ. ವಿಶ್ವ ಆರ್ಥಿಕ ವೇದಿಕೆ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ವರದಿಯ ಪ್ರಕಾರ ಜಗತ್ತಿನ 142 ರಾಷ್ಟ್ರಗಳಲ್ಲಿ ಭಾರತ 114ನೇ ಸ್ಥಾನದಲ್ಲಿದೆ.

### 4. 80 ಸಾವಿರ ಕೋಟಿ ರೂ.ಗಳ ರಕ್ಷಣಾ ಯೋಜನೆಗೆ ಒಪ್ಪಿಗೆ :

ರಕ್ಷಣಾ ಇಲಾಖೆಗೆ ಸೇರಿದ ಒಟ್ಟು ರೂ. 80 ಸಾವಿರ ಕೋಟಿ ವೆಚ್ಚದ ಯೋಜನೆಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಆರು ಜಲಾಂತರ್ಗಾಮಿಗಳನ್ನು ದೇಶೀಯವಾಗಿ ನಿರ್ಮಿಸಲು ತೀರ್ಮಾನಿಸಿದ್ದು ಇದಕ್ಕಾಗಿ ರೂ. 50 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತದೆ.

### 5. ಮನಮೋಹನ್ ಸಿಂಗ್‌ಗೆ ಜಪಾನ್ ರಾಷ್ಟ್ರೀಯ ಪ್ರಶಸ್ತಿ :

ಜಪಾನ್‌ನ ಅತ್ಯುನ್ನತ ಪುರಸ್ಕಾರವಾದ 'ದ ಗ್ರಾಂಡ್ ಕಾರ್ಡನ್ ಆಫ್ ದ ಆರ್ಡರ್ ಆಫ್ ದ ಪೌಲೋವ್ನಿಯಾ ಫ್ಲವರ್ಸ್' ರಾಷ್ಟ್ರೀಯ ಪ್ರಶಸ್ತಿಯನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ಗೆ ನೀಡಲು ನಿರ್ಧರಿಸಲಾಗಿದೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

### 1. ಬ್ರಿಟನ್ : ಭಾರಿ ನಿಧಿ ಪತ್ತೆ :

ಬ್ರಿಟನ್ನಿನ ಲೋಹಶೋಧಕ ಡೆರಿಕ್ ಮೆಕ್‌ಲೆನಾನ್ ಭಾರಿ ನಿಧಿಯೊಂದನ್ನು ಪತ್ತೆ ಮಾಡಿದ್ದಾರೆ. ಸ್ಕಾಟ್ಲೆಂಡ್‌ನ ಚರ್ಚ್ ಇದ್ದ ಜಾಗದಲ್ಲಿ ಈ ನಿಧಿ ಪತ್ತೆಯಾಗಿದ್ದು, ಈ ಸ್ಥಳದಲ್ಲಿ ಕರೊಲಿಂಗಿಯನ್ ರಾಜರ ಕಾಲದ ಬೃಹತ್ ಬೆಳ್ಳಿ ಪಾತ್ರೆ, ನೂರಕ್ಕೂ ಹೆಚ್ಚು ಕಲಾಕೃತಿಗಳು, ಬೆಳ್ಳಿ ಶಿಲುಬೆಗಳು ದೊರೆತಿವೆ. ಇವು ಸುಮಾರು 1,200 ವರ್ಷಗಳಷ್ಟು ಪುರಾತನವಾದದ್ದು ಎನ್ನಲಾಗಿದೆ.

### 2. ರೈಲು ಮಾರ್ಗ ಪುನರ್ ಆರಂಭ :

ಶ್ರೀಲಂಕಾದ ಯುದ್ಧಭೂಮಿ ಎನಿಸಿದ ಜಾಫ್ನಾದಿಂದ ದೇಶದ ರಾಜಧಾನಿ ಕೊಲೊಂಬೊ ಸಂಪರ್ಕಿಸುವ ಸುಮಾರು 400 ಕೀ.ಮೀ. ಉದ್ದದ ರೈಲು ಮಾರ್ಗ ಪುನರ್ ಆರಂಭಗೊಂಡಿದೆ. ಭಾರತದ ಸಹಭಾಗಿತ್ವದಲ್ಲಿ ಈ ರೈಲು ಮಾರ್ಗವನ್ನು ಪುನರ್ ನಿರ್ಮಿಸಲಾಗಿದೆ. ಸುಮಾರು 24 ವರ್ಷಗಳ ಕಾಲ ಈ ಮಾರ್ಗವನ್ನು ಯುದ್ಧದ ಕಾರಣ ಮುಚ್ಚಲಾಗಿತ್ತು.

### 3. ಚೀನಾ 27 ಅಪರಾಧಿಗಳಿಗೆ ಗಲ್ಲು :

ಮುಸ್ಲಿಂ ಪ್ರಾಬಲ್ಯದ ಕ್ಲಿನ್‌ಜಿಯಾಂಗ್ ಪ್ರದೇಶದಲ್ಲಿ ಕಳೆದ ಜುಲೈನಲ್ಲಿ ನಡೆದ ದಾಳಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಚೀನಾದ ನ್ಯಾಯಾಲಯ ಒಟ್ಟು 27 ಅಪರಾಧಿಗಳಿಗೆ ಮರಣದಂಡನೆ ವಿಧಿಸಿದೆ.

### 4. ಹೊಸ ಎಲ್‌ಇಡಿ ಬಲ್ಬ್ :

ಸಾಮಾನ್ಯಕ್ಕಿಂತ ಸಾವಿರ ಪಟ್ಟು ಹೆಚ್ಚು ಪ್ರಖರವಾಗಿ ಬೆಳಕನ್ನು ಹೊರಸೂಸುವ ನೂತನ ಮಾದರಿಯ ಎಲ್‌ಇಡಿ ಬಲ್ಬ್‌ಗಳನ್ನು ಸಂಶೋಧಕರು ಕಂಡುಹಿಡಿದಿದ್ದಾರೆ. ಕಣ್ಣಿನ ರೆಪ್ಪೆಯನ್ನು ಮಿಣಿಕಿಸುವದರ ಒಳಗೆ ಒಂದು ಕೋಟಿ ಕಿರಣಗಳನ್ನು ಇದು ಹೊರಸೂಸಲಿದೆ ಎಂದು ಸಂಶೋಧಕರು ಹೇಳಿದ್ದಾರೆ.

### 5. ಕಾಶ್ಮೀರ ವಿವಾದ : ಅಮೆರಿಕ ಸಂಸದರ ಮುಂದೆ ಪ್ರಸ್ತಾಪ :

ಕಾಶ್ಮೀರ ವಿಷಯದಲ್ಲಿ ಮಧ್ಯ ಪ್ರವೇಶ ಮಾಡುವಂತೆ ವಿಶ್ವಸಂಸ್ಥೆಗೆ ಮನವಿ ಮಾಡಿರುವ ಪಾಕಿಸ್ತಾನ, ಈ ವಿಚಾರವನ್ನು ಅಮೆರಿಕದ ಇಬ್ಬರು ಸಂಸದರ ಮುಂದೆಯೂ ಪ್ರಸ್ತಾಪ ಮಾಡಿದೆ.

ಡಿಸೆಂಬರ್ 1

## ಕ್ರಿಸ್ತನು ವಾಸವಾಗಿ

ಬೆಳಿಗ್ಗೆ : ಯೆಹೆ. 40, 41
ಸಂಜೆ : 2 ಪೇತ್ರ. 3

ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ (ಎಫೆ. 3:17).

ನಿಮ್ಮ ಹೃದಯದಲ್ಲಿ ಕ್ರಿಸ್ತನು ವಾಸವಾಗಿರುವನಾ? ಆತನ ಮಹಿಮೆಯ ಪ್ರಸನ್ನತೆ ತುಂಬಿರುವದಾ? ಎಲ್ಲಿ ಹೋದರೂ ಯೇಸು ಕ್ರಿಸ್ತನನ್ನು ನಿಮ್ಮೊಂದಿಗೆ ಕರೆದೊಯ್ಯುವಿರಾ? ಎಂಬುದನ್ನು ಸ್ವಲ್ಪ ಯೋಚಿಸಿ ನೋಡಿರಿ. ಇಲ್ಲವೆಂದಾದರೆ ಆತನು ಬಂದು ನಿಮ್ಮ ಹೃದಯಗಳಲ್ಲಿ ವಾಸಿಸಲು ಸ್ಥಳಕೊಡಿರಿ.

ಲವೊದೀಕಿಯ ಸಭೆ ದೇವರ ಸಭೆಯಾಗಿದ್ದರೂ ಸಹ ಕ್ರಿಸ್ತನು ಸಭೆಯ ಬಾಗಿಲಿನ ಬಳಿ ನಿಂತು ತಟ್ಟುತ್ತಲೇ ಇದ್ದನು. ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ, ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು ಎಂದು ದೇವರ ವಾಕ್ಯ ಹೇಳುತ್ತದೆ (ಪ್ರಕ. 3:20). ಊಟ ಮಾಡುವದು ಎಂಬುದು ದೇವರೊಂದಿಗಿನ ಅನ್ಯೋನ್ಯತೆಯನ್ನು ಸೂಚಿಸುವದು. ಕ್ರಿಸ್ತನು ಪರಲೋಕದಿಂದ ಈ ಭೂಮಿಗೆ ಇಳಿದುಬಂದು ನಿಮ್ಮ ಹೃದಯಗಳಲ್ಲಿ ವಾಸಮಾಡಲು ಬಯಸುತ್ತಾನೆ. ಆತನು ಪ್ರೀತಿಯಿಂದ ಮಗನೇ, ಮಗಳೇ, ನಿಮ್ಮೊಳಗೆ ಬಂದು ನಾನು ನಿನ್ನ ಮೇಲೆ ಆಳ್ವಿಕೆ ನಡೆಸಲಾ? ಎಂದು ಕೇಳುವನು. ಪರಲೋಕದ ದೇವರು ನಿಮ್ಮೊಳಗೆ ವಾಸಮಾಡುವದು ಎಷ್ಟು ದೊಡ್ಡ ಭಾಗ್ಯವಲ್ಲವೇ? ಆತನು ಬಂದು ಹೊರಟುಹೋಗುವ ಅತಿಥಿಯಲ್ಲ, ಸದಾಕಾಲಕ್ಕೂ ತಂಗಿ ಇರುವ ಪ್ರಾಣ ಪ್ರಿಯನಾಗಿರುವನು. ದ್ವಾರಗಳೇ ಉನ್ನತವಾಗಿರ್ರಿ. ಪುರಾತನವಾದ ಕದಗಳೇ, ತೆರೆದುಕೊಂಡಿರ್ರಿ. ಮಹಾ ಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ. ಮಹಾ ಪ್ರಭಾವವುಳ್ಳ ಈ ಅರಸನು ಯಾರು? ಮಹಾ ಬಲಿಷ್ಠನೂ, ವಿಶೇಷ ಪರಾಕ್ರಮಿಯೂ ಆದ ಯುದ್ಧವೀರನೂ ಆಗಿರುವ ಯೆಹೋವನು (ಕೀರ್ತ.24:7,8) ಎಂದು ಕೀರ್ತನೆಗಾರನಾದ ದಾವೀದನು ಹೇಳುತ್ತಾನೆ. ಕ್ರಿಸ್ತನು ನಿಮ್ಮೊಳಗೆ ಬರುವುದಾದರೆ ಅಲ್ಲಿ ಅಂಧಕಾರದ ಶಕ್ತಿ ಇರಲು ಸಾಧ್ಯವಿಲ್ಲ. ಅಂಧಕಾರ ಲೋಕಾಧಿಪತಿ ಸೈತಾನನು ತಂಗಲು ಸಾಧ್ಯವಿಲ್ಲ. ಅಲ್ಲಿ ಬೆಳಕು ಉಂಟಾಗುವದು. ಸಂತೋಷ ಉಂಟಾಗುವದು. ಶಾಪದ ಬಲ ಮುರಿಯಲ್ಪಟ್ಟು ಆಶೀರ್ವಾದವನ್ನು ತರುವದು. ವ್ಯಾಧಿಗಳು ನೀಗಲ್ಪಟ್ಟು ಆರೋಗ್ಯವುಂಟಾಗುವದು.

ದೇವಮಕ್ಕಳೇ, ಇಂದು ಕ್ರಿಸ್ತನು ಮಹಿಮೆಯಿಂದ ಕೂಡಿದವನಾಗಿ ನಿಮ್ಮ ಹೃದಯಗಳಲ್ಲಿ ಇಳಿದುಬರಲಿ. ಆತನು ನೀಡುವ ದೈವೀಕ ಸಂತೋಷ ಸಮಾಧಾನಗಳಿಂದ ತುಂಬಲ್ಪಡಿರಿ.

*ನೆನಪಿಗೆ : "ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು" (ವಿಮೋ. 25:8).*



ಡಿಸೆಂಬರ್ 2

## ವಾಸಿಸುವಂತೆ!

ಬೆಳಿಗ್ಗೆ : ಯೆಹೆ. 42,43,44
ಸಂಜೆ : 1 ಯೋಹಾ.1

"ತಮ್ಮ ಮಧ್ಯದಲ್ಲಿ ವಾಸಮಾಡುವದಕ್ಕಾಗಿಯೇ ತಮ್ಮನ್ನು ಐಗುಪ್ತದೇಶದಿಂದ ಹೊರಗೆ ಬರಮಾಡಿದ ತಮ್ಮ ದೇವರಾದ ಯೆಹೋವನು ನಾನೇ ಎಂದು ತಿಳಿದುಕೊಳ್ಳಿರಿ" (ವಿಮೋ.29:46).

ಕರ್ತನು ಇಸ್ರಾಯೇಲ್ಯರ ಮಧ್ಯದಲ್ಲಿ ವಾಸಮಾಡಬೇಕಾದರೆ ಅವರು ಐಗುಪ್ತವನ್ನು ಬಿಟ್ಟು, ಕೆಂಪು ಸಮುದ್ರವನ್ನು ದಾಟಿ ಬರಬೇಕು. ಅಲ್ಲಿ ಕರ್ತನು ತಮ್ಮೊಂದಿಗೆ ವಾಸಿಸುವನು ಎಂದು ತಿಳಿಯುವಂತೆ ಮೇಘಸ್ಥಂಭ, ಅಗ್ನಿಸ್ತಂಭಗಳನ್ನು ತಂದು ಇಳಿಸಿದನು. ಹಗಲಲ್ಲಿ ಮೇಘಸ್ತಂಭವೂ, ಇರುಳಿನಲ್ಲಿ ಅಗ್ನಿಸ್ತಂಭವೂ ಅವರ ಮುಂದಾಗಿ ನಡೆದವು.

ಇಸ್ರಾಯೇಲ್ಯರು ಪ್ರಯಾಣ ಮಾಡದ ದಿನಗಳಲ್ಲಿ ಮೇಘಸ್ತಂಭವೂ, ಅಗ್ನಿ ಸ್ತಂಭವೂ, ದೇವದರ್ಶನ ಗುಡಾರದ ಮೇಲೆ ನಿಂತಿತು. ಜನರು ಅದನ್ನು ನೋಡಿ ಸಂತೋಷಪಟ್ಟು "ದೇವರು ನಮ್ಮೊಂದಿಗಿರುವನು" ಎಂದು ನೆಮ್ಮದಿ ಪಟ್ಟಿರಬಹುದು. ಕರ್ತನು ಅವರೊಂದಿಗೆ ಇದ್ದದ್ದರಿಂದ ದುಷ್ಟ ಮೃಗಗಳು, ದುಷ್ಟ ಜಂತುಗಳು ಅವರನ್ನು ಮುಟ್ಟಲಾಗಲಿಲ್ಲ. ಪ್ರಿಯರೇ, ಇಂದೂ ಸಹ ದೇವರು ನಿಮ್ಮೊಂದಿಗಿರುವನು. ಐಗುಪ್ತ ಎಂಬುದು ಪ್ರಪಂಚದ ಪಾಪ, ಇಚ್ಛೆಗಳನ್ನು ಫರೋಹನನು ಲೋಕಾಧಿಪತಿಯಾದ ಸೈತಾನನನ್ನೂ ಸೂಚಿಸುವದು. ಅವನ ಆಳ್ವಿಕೆಯನ್ನು ತೊರೆದು ಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು ನೀವು ಹೊರಗೆ ಬರಬೇಕು. ದೀಕ್ಷಾಸ್ನಾನವೆಂಬ ಕೆಂಪು ಸಮುದ್ರವನ್ನು ದಾಟುವಾಗ ದೇವ ಪ್ರಸನ್ನತೆಯನ್ನು ನಿಮ್ಮೊಳಗೆ ಅನುಭವಿಸುವಿರಿ. ನನ್ನೊಳಗೆ ಬಂದು ವಾಸಮಾಡೆಂದು ಕರ್ತನನ್ನು ಪ್ರೀತಿಯಿಂದ ಕರೆಯಿರಿ. ಐಗುಪ್ತವನ್ನೂ, ಹಾಲೂ ಜೇನೂ ಹರಿಯುವ ಕಾನಾನನ್ನೂ ಒಂದುಗೂಡಿಸಲು ಸಾಧ್ಯವಿಲ್ಲ. ಫರೋಹನ ಆಳ್ವಿಕೆಯಿಂದ ಹೊರಗೆ ಬರುವಾಗ ಮಾತ್ರ ಕ್ರಿಸ್ತನ ಆಳ್ವಿಕೆಯನ್ನು ನೀವು ಅನುಭವಿಸಲು ಸಾಧ್ಯ. ಯೇಸುಕ್ರಿಸ್ತನನ್ನು ನಿಮ್ಮೊಳಗೆ ಆಹ್ವಾನಿಸುವಾಗ ಆತನು ನಿಮ್ಮ ಜೀವಿತದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ ನಿಮ್ಮ ಆಂತರ್ಯದಲ್ಲಿ ಸಮಾಧಾನವನ್ನು, ಶಾಂತಿಯನ್ನು ನೆಲೆಗೊಳಿಸುವನು.

ದೇವಮಕ್ಕಳೇ, ನಿಮ್ಮೊಳಗಿನ ಫರೋಹನನ್ನು ತೊಲಗಿಸಿರಿ. ದೇವರಿಗೆ ವಿರುದ್ಧವಾದ ಅಸಹ್ಯವಾದ ಎಲ್ಲಾ ಸಂಗತಿಗಳನ್ನು ಹೊಡೆದೋಡಿಸಿರಿ. ದೇವರ ಆಲಯಕ್ಕೂ, ವಿಗ್ರಹಗಳಿಗೂ ಸಂಬಂಧವೇನು? ನೀವೇ ದೇವರ ಆಲಯವಾಗಿದ್ದೀರಿ. ಕರ್ತನು ನಿಮ್ಮೊಳಗೆ ವಾಸಿಸಲು ಬಯಸುವನು.

*ನೆನಪಿಗೆ : "ಆದುದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟುಬಂದು ಪ್ರತ್ಯೇಕವಾಗಿರಿ. ಅಶುದ್ಧವಾದ ಯಾವದನ್ನೂ ಮುಟ್ಟದಿರಿ" ಎಂದು ಕರ್ತನು ಹೇಳುತ್ತಾನೆ (2 ಕೊರಿಂಥ 6:17).*

## ಡಿಸೆಂಬರ್ 3 ಬಿಡಾರ ಮಾಡಿಕೊಳ್ಳುವೆವು!

ಬೆಳಿಗ್ಗೆ : ಯೆಹೆ. 45, 46
ಸಂಜೆ : 1 ಯೋಹಾ.2

ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು (ಯೋಹಾನ. 14:23).

ಕ್ರಿಸ್ತನು ನಿಮ್ಮೊಳಗೆ ವಾಸವಾಗಿದ್ದರೆ, ಆತನೇ ನಿಮ್ಮ ಕುರುಬನಾಗಿಯೂ, ದೇವರಾಗಿಯೂ ಇರುವನು. ಆದ್ದರಿಂದ ನಿಮ್ಮ ಭಾವನೆಗಳನ್ನೂ, ಚಿಂತನೆಗಳನ್ನೂ, ಆಳುವಂತೆ ನಿಮ್ಮನ್ನು ಕ್ರಿಸ್ತನಿಗೆ ಒಪ್ಪಿಸಿಕೊಡಿರಿ. ಅಪೊ. ಪೌಲನು ಕ್ರಿಸ್ತನು ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆ ನಾನು ತಂದೆಯ ಮುಂದೆ ಮೊಣಕಾಲೂರಿ ಬೇಡಿಕೊಳ್ಳುವೆನು (ಎಫೆ. 3:17,15) ಎಂದು ಹೇಳುತ್ತಾನೆ.

ಬೋಧಕರಾದ ಪಾಲ್‌ಯಾಂಗಿ ಚೋರವರ ಬಳಿ ಒಬ್ಬ ವಿಶ್ವಾಸಿ ಒಂದು ಪ್ರಶ್ನೆಯನ್ನು ಕೇಳಿದನು. "ಅಯ್ಯಾ, ಯೇಸುಕ್ರಿಸ್ತನು ಪುನರುತ್ಥಾನ ಹೊಂದಿ ಪರಲೋಕಕ್ಕೆ ಏರಿಹೋಗಿ ತಂದೆಯ ಬಲಪಾರ್ಶ್ವದಲ್ಲಿ ಕುಳಿತಿರುವನೆಂದು ಹೇಳುವಿರಿ. ಅದೇ ವೇಳೆಯಲ್ಲಿ ವಿಶ್ವಾಸಿಗಳ ಆಂತರ್ಯದಲ್ಲಿ ವಾಸವಾಗಿರುವನು ಎಂದೂ ಹೇಳುತ್ತೀರಿ. ಇದು ಹೇಗೆ ಸಾಧ್ಯ? ನಮ್ಮ ಸಭೆಯಲ್ಲಿ ಲಕ್ಷಾಂತರ ವಿಶ್ವಾಸಿಗಳಿರುವರು. ಅವರಲ್ಲಿ ಯಾರ ಆಂತರ್ಯದಲ್ಲಿ ಆತನು ವಾಸಮಾಡುವನು? ಎಂದು ಕೇಳಿದನು. ಬೋಧಕರು ಅವನ ಮನೆಗೆ ಕರೆದುಕೊಂಡು ಹೋಗಿ ಆ ಮನೆಯ ಹಿತ್ತಲಿನಲ್ಲಿದ್ದ ಬಾವಿಯ ಬಳಿ ನಿಂತು ಅವನನ್ನು ಆಕಾಶವನ್ನು ನೋಡು! ಅಲ್ಲಿ ಚಂದ್ರನು ಎಷ್ಟು ಚೆನ್ನಾಗಿ ಪ್ರಕಾಶಿಸುತ್ತಿದ್ದಾನೆ. ಕೆಳಗೆ ಬಾವಿಯನ್ನು ನೋಡು, ಬಾವಿಯ ಒಳಗೆ ಇರುವ ನೀರಿನಲ್ಲಿ ಚಂದ್ರನನ್ನು ನೋಡುತ್ತಿರುವೆಯಲ್ಲವೇ? ಎಂದು ಹೇಳಿ ಅವನನ್ನು ಪಕ್ಕದಲ್ಲಿರುವ ಇನ್ನೊಬ್ಬ ವಿಶ್ವಾಸಿಯ ಮನೆಯ ಹಿಂದೆ ಇರುವ ಬಾವಿಯ ಬಳಿ ಕರೆದುಕೊಂಡು ಹೋದಾಗ, ಆ ಬಾವಿಯಲ್ಲೂ ಚಂದ್ರಬಿಂಬ ಕಾಣಿಸಿತು. ಆಗ ಅವರು ಅವನಿಗೆ ಹೀಗೆಯೇ ತಂದೆಯ ಬಲಪಾರ್ಶ್ವದಲ್ಲಿಯೂ ಎಲ್ಲಾ ವಿಶ್ವಾಸಿಗಳ ಆಂತರ್ಯದಲ್ಲಿಯೂ ಯೇಸುಕ್ರಿಸ್ತನು ವಾಸಿಸುವನು ಎಂದು ತಿಳಿಸಿ ಹೇಳಿದರು.

ದೇವಮಕ್ಕಳೇ, ಹಳೇ ಒಡಂಬಡಿಕೆಯ ಕಾಲದಲ್ಲಿ ಕರ್ತನು ದೇವದರ್ಶನ ಗುಡಾರದಲ್ಲಿ ದೇವಾಲಯದಲ್ಲಿ ವಾಸಿಸಿದನು. ಆದರೆ ಹೊಸ ಒಡಂಬಡಿಕೆಯಲ್ಲಿ ಆತನು ಕೈಗಳಿಂದ ಕಟ್ಟಿದ ಆಲಯದಲ್ಲಿ ವಾಸಿಸುವದಿಲ್ಲ (ಅ.ಕೃ. 17:24). ನಿಮ್ಮನ್ನೇ ಆತನು ತನ್ನ ಅಲಯವಾಗಿಸಿಕೊಂಡು ನಿಮ್ಮೊಳಗೆ ವಾಸಿಸಲು ಬಯಸುವನು (1 ಕೊರಿಂ. 3:16). ಪ್ರಿಯರೇ, ದೇವರು ವಾಸಿಸುವ ಪರಿಶುದ್ಧ ಸ್ಥಳವಾಗಿ ನಿಮ್ಮನ್ನು ಒಪ್ಪಿಸಿಕೊಡಿರಿ.

*ನೆನಪಿಗೆ : ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆ ಎಂಬುದು ನಿಮಗೆ ತಿಳಿಯದೋ? (1 ಕೊರಿಂ. 6:19).*



## ಡಿಸೆಂಬರ್ 4 ಕ್ರಿಸ್ತನ ಆತ್ಮ!

ಬೆಳಿಗ್ಗೆ : ಯೆಹೆ. 47,48
ಸಂಜೆ : 1 ಯೋಹಾ.3

ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ (ರೋಮಾ. 8:9).

ನಿಮ್ಮ ಹೃದಯದಲ್ಲಿ ಕ್ರಿಸ್ತನು ಮಾತ್ರವಲ್ಲ, ಕ್ರಿಸ್ತನ ಆತ್ಮವೂ ವಾಸವಾಗಿರಲಿ. ಕ್ರಿಸ್ತನ ಆತ್ಮ ಅಂದರೆ ಏನು? ಅದುವೇ ಆತನ ಸ್ವಭಾವ. ಆತನ ಗುಣಾತಿಶಯಗಳು ಕ್ರಿಸ್ತನು ನಿಮ್ಮಲ್ಲಿ ವಾಸವಾಗಿರುವಾಗ ಆತನಲ್ಲಿದ್ದ ಯೋಚನೆ ನಿಮ್ಮಲ್ಲಿ ಕಾಣಲ್ಪಡುವದು. ಲೌಕೀಕ ಚಿಂತನೆ, ಸ್ವಾರ್ಥ ಚಿಂತನೆಗಳು ನಿಮ್ಮನ್ನು ಬಿಟ್ಟು ಹೊರಗೆ ಹೋಗಲೇಬೇಕು. "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2 ಕೊರಿಂ. 5:17) ಎಂದು ಅಪೊ. ಪೌಲನು ಬರೆಯುತ್ತಾನೆ. ಶಾರೀರಿಕ ಭಾವನೆಗಳಿಂದ ಹೊರಡುವ ಕೋಪ, ಅಸೂಯೆ, ಇಚ್ಛೆಗಳು ನಿಮ್ಮನ್ನು ಜಯಿಸಲಾಗದು.

ಒಮ್ಮೆ ಯೇಸುಕ್ರಿಸ್ತನು ತನ್ನ ಶಿಷ್ಯರೊಂದಿಗೆ ಸಮಾರ್ಯಕ್ಕೆ ಹೊರಟನು. ಆದರೆ ಅಲ್ಲಿನ ಜನರು ಅವರ ಮೊಂಡತನದಿಂದಾಗಿ ಜಾತಿವ್ಯತ್ಯಾಸದಿಂದಾಗಿ ಯೇಸುವನ್ನೂ ಆತನ ಶಿಷ್ಯರನ್ನೂ ಅಂಗೀಕರಿಸಲಿಲ್ಲ. ಶಿಷ್ಯರಿಗೆ ಅವರ ಮೇಲೆ ಕೋಪ ಉಂಟಾಯಿತು. ದೇವರೇ, ಎಲೀಯನಂತೆ ಆಕಾಶದಿಂದ ಬೆಂಕಿ ಇಳಿಸಿ ಜನರನ್ನು ನಾಶಮಾಡಿಬಿಡೋಣವೇ? ಎಂದು ಕೇಳಿದರು. ಅದಕ್ಕೆ ಯೇಸು ನೀವು ನನ್ನ ಆತ್ಮವನ್ನು ಹೊಂದಿದವರೆಂದು ತಿಳಿದಿಲ್ಲವೇ? ಎಂದು ಗದರಿಸಿದನು (ಲೂಕ. 9:53–56). ಕ್ರಿಸ್ತನ ಆತ್ಮವಾದ ಕನಿಕರ, ದೈವೀಕ ಪ್ರೀತಿ ಅವರ ಹೃದಯಗಳಲ್ಲಿ ನೆಲೆಸಿರಲಿಲ್ಲ. ಕರ್ತನು ನಾಶಮಾಡಲು ಅಲ್ಲ ರಕ್ಷಿಸುವದಕ್ಕೆ ಬಂದಾತನು. "ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು" ಎಂದು ಸತ್ಯವೇದ ಹೇಳುತ್ತದೆ (ಲೂಕ.19:10).

ದೇವಮಕ್ಕಳೇ, ನಿಮ್ಮನ್ನು ಕ್ರಿಸ್ತನ ಪ್ರೀತಿ ಒತ್ತಾಯಪಡಿಸುವದಾ? ಇಲ್ಲವೇ ಕೋಪ, ಮತ್ಸರಗಳು ನಿಮ್ಮನ್ನು ನಡಿಸುವದಾ? ಕ್ರಿಸ್ತಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ (ರೋಮಾ. 8:1). ಎಂದಿಗೂ ನಿಮ್ಮ ಶತ್ರುಗಳ ನಾಶವನ್ನು ನಿರೀಕ್ಷಿಸದಿರಿ. ನಿಮ್ಮನ್ನು ನಿಮ್ಮ ಇಷ್ಟದಂತೆ ಆಳಲು ಬಿಡದಿರಿ. ಮಾತ್ರವಲ್ಲ, ನಿಮ್ಮ ಅವಯವಗಳನ್ನು ಕ್ರಿಸ್ತನ ಅವಯವಗಳಾಗುವಂತೆ ಒಪ್ಪಿಸಿಕೊಡಿರಿ. ಕ್ರಿಸ್ತನ ಆತ್ಮ ಆಳುವಂತೆ ಒಪ್ಪಿಸಿಕೊಡಿರಿ. ನಿಮ್ಮ ಶರೀರ ದೇವರ ಆಲಯವೆಂದು ಕ್ರಿಸ್ತನ ಅವಯವವೆಂದು ಸತ್ಯವೇದ ಹೇಳುತ್ತದೆ (1 ಕೊರಿಂ. 6:19, 12:27).

*ನೆನಪಿಗೆ : ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ, ದೇವರು ಅವನನ್ನು ಕೆಡಿಸುವನು. ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು. ಆ ಆಲಯವು ನೀವೇ (1 ಕೊರಿಂ. 3:17).*

ಡಿಸೆಂಬರ್ 5

## ಪ್ರೀತಿ ನೆಲೆಸಿರುವದು!

ಬೆಳಿಗ್ಗೆ : ದಾನಿಯೇಲ 1
ಸಂಜೆ : 1 ಯೋಹಾ. 4

ನಮ್ಮನ್ನು ನಮ್ಮ ಕರ್ತನಾದ ಯೇಸುಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸುವವರು ಯಾರು? (ರೋಮಾ. 8:35).

ಕ್ರಿಸ್ತನು ನಿಮ್ಮಲ್ಲಿ ವಾಸವಾಗಿರುವದಾದರೆ, ಆತನ ಪ್ರೀತಿ ನಿಮ್ಮೊಳಗೆ ನೆಲೆಗೊಂಡಿರುವದು. ಪ್ರಪಂಚದಲ್ಲಿ ಸುಂದರವಾದ ಉತ್ತಮವಾದ ಮಾತೆಂದರೆ 'ಪ್ರೀತಿ'. ಅದರಲ್ಲೂ ಅತಿಶಯವಾದದ್ದು ಕ್ರಿಸ್ತನ ಪ್ರೀತಿ. ಅದನ್ನು 'ಅಗಾಫೆ' ಎಂದು ಕರೆಯುವರು. ಯಾವದೇ ಸ್ವಾರ್ಥವಿಟ್ಟುಕೊಳ್ಳದೆ, ನಿರಂತರವೂ ಪ್ರೀತಿಸುತ್ತಲೇ ಇರುವದೇ ಕ್ರಿಸ್ತನ ಪ್ರೀತಿಯಾಗಿದೆ. ಒಳ್ಳೆಯವರ ಮೇಲೂ, ಕೆಟ್ಟವರ ಮೇಲೂ ಸೂರ್ಯನು ಉದಯಿಸುವಂತೆ ಮಾಡಿ ಮಳೆಯನ್ನು ಸುರಿಸುವಂತೆ ಮಾಡುವ ಪ್ರೀತಿಯೇ ಕ್ರಿಸ್ತನ ಪ್ರೀತಿ ಅಥವಾ ದೈವೀಕ ಪ್ರೀತಿ.

ದೇವರ ಪ್ರೀತಿಯನ್ನು ಯೋಚಿಸುವಾಗ, ವಿಶೇಷವಾಗಿ ಕಲ್ವಾರಿ ಪ್ರೀತಿಯನ್ನು ಚಿಂತಿಸುವಾಗ, ಕಲ್ಲಾದ ಮನಸ್ಸೂ ಕರಗುವದು. ಕಣ್ಣುಗಳಲ್ಲಿ ನೀರು ತುಂಬಿ ಬರುವದು. ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ (ರೋಮಾ. 5:8). ಕೆಲವು ವೇಳೆಗಳಲ್ಲಿ ಕರ್ತನು ನಿಮ್ಮನ್ನು ತಂದೆಯಂತೆ ಪ್ರೀತಿಸುವನು (ಕೀರ್ತ. 103:13). ಕೆಲವು ವೇಳೆ ತಾಯಿಯಂತೆ ಸಂತೈಸುವನು. ಕೆಲವು ವೇಳೆ ಒಡಹುಟ್ಟಿದವನಂತೆ ನಿಮಗಾಗಿ ಎದ್ದು ನಿಲ್ಲುವನು. ಕೆಲವು ವೇಳೆ ಒಬ್ಬ ಸ್ನೇಹಿತನಂತೆ ಮುಖಾಮುಖಿಯಾಗಿ ಮಾತನಾಡುವನು. ಆದರೆ ಕಲ್ವಾರಿ ಶಿಲುಬೆಯಲ್ಲಿ ಅತನು ತೋರಿದ ಪ್ರೀತಿಗೆ ಸಾಟಿಯಾದದ್ದು ಮತ್ತೊಂದಿಲ್ಲ. ಕ್ರಿಸ್ತನು ನಿಮ್ಮೊಳಗೆ ನೆಲೆಗೊಂಡಿದ್ದರೆ ಆತನ ಪ್ರೀತಿಯನ್ನೂ, ಕರುಣೆಯನ್ನೂ, ಕನಿಕರವನ್ನೂ ನೀವು ಇತರರಿಗೆ ತೋರಿಸುವಿರಿ. ಜಾತಿ ವ್ಯತ್ಯಾಸವಿಲ್ಲದೆ, ಅಂತಸ್ತಿನ ವ್ಯತ್ಯಾಸವಿಲ್ಲದೆ ಎಲ್ಲರಿಗೂ ನಿಮ್ಮ ಪ್ರೀತಿಯನ್ನು ತೋರಿಸುವಿರಿ. ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ (ಕೊಲೊ. 3:13). ಎಲ್ಲಕ್ಕೂ ಮೇಲಾಗಿ ನಿಮ್ಮ ನಿಮ್ಮೊಳಗೆ ಯಥಾರ್ಥವಾದ ಪ್ರೀತಿ ಇರಲಿ (1 ಪೇತ್ರ. 4:8). ಕ್ರಿಸ್ತನ ಪ್ರೀತಿ ನಿಮ್ಮಲ್ಲಿರುವದಾದರೆ ಇತರರು ಮಾಡುವ ದೊಡ್ಡ ತಪ್ಪು ದೊಡ್ಡದಾದರೂ, ಅದು ಚಿಕ್ಕದಾಗಿ ಕಾಣುವದಲ್ಲವೇ?

ಆದ್ದರಿಂದ ದೇವಜನರೇ, ನಿಮ್ಮಲ್ಲಿ ಕ್ರಿಸ್ತನು ನೆಲೆಗೊಂಡಿರುವನೆಂದು ತಿಳಿದು, ಪ್ರೀತಿಯೆಂಬ ಆತ್ಮೀಕ ಫಲವನ್ನು ಇತರರಿಗೆ ನೀಡಿ ಇತರರ ತಪ್ಪುಗಳನ್ನು ಎಣಿಸದೆ ಅವರನ್ನು ಮನ್ನಿಸಿರಿ. ಕರ್ತನೆಡೆಗೆ ಕ್ರಿಸ್ತನ ಪ್ರೀತಿಗೆ ಸಾಕ್ಷಿಗಳಾಗಿ ಇರಿ.

*ನೆನಪಿಗೆ : ನಿಮ್ಮ ದೇಶದಲ್ಲಿ ಇಳುಕೊಂಡಿರುವ ಪರದೇಶದವರಿಗೆ ಅನ್ಯಾಯವೇನೂ ಮಾಡಬಾರದು. ಅವರು ನಿಮಗೆ ಸ್ವದೇಶದವರಂತೆಯೇ ಇರಬೇಕು. ಅವರನ್ನು ನಿಮ್ಮಂತೆಯೇ ಪ್ರೀತಿಸಬೇಕು. ಐಗುಪ್ತದೇಶದಲ್ಲಿದ್ದಾಗ ನೀವೂ ಅನ್ಯರಾಗಿದ್ದಿರಲ್ಲವೇ (ಯಾಜ. 19:33,34).*



ಡಿಸೆಂಬರ್ 6

## ನಂಬಿಕೆ ನೆಲೆಗೊಂಡಿರುವದು!

ಬೆಳಿಗ್ಗೆ : ದಾನಿ. 3,4
ಸಂಜೆ : 1 ಯೋಹಾ. 5

"ಈ ಮರ್ಮವು ಏನಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ" (ಕೊಲೊ. 1:27).

ಕ್ರಿಸ್ತನು ನಿಮ್ಮೊಳಗೆ ನೆಲೆಸಿರುವದಾದರೆ, ಆತನೇ ನಿಮ್ಮ ಪ್ರಭಾವ ನಿರೀಕ್ಷೆಗೆ ಆಧಾರಭೂತನಾಗಿರುವನು. ಮಹಿಮೆಯಾದ ನಂಬಿಕೆ ನಿಮ್ಮಲ್ಲಿ ಇರುವದು. ಇತರ ಎಲ್ಲಾ ಧಾರ್ಮಿಕ ಮಾರ್ಗಗಳಿಗಿಂತಲೂ ಕ್ರೈಸ್ತಮಾರ್ಗ ಯಾವದರಿಂದ ವಿಶೇಷವಾದದ್ದು. ಹೌದು, ಕ್ರೈಸ್ತಮಾರ್ಗದಲ್ಲಿ ಪ್ರಭಾವ ನಿರೀಕ್ಷೆ ನಂಬಿಕೆಗಳುಂಟು. ಕ್ರಿಸ್ತನೇ ಮಹಿಮೆಯ ನಂಬಿಕೆಯಾಗಿ ನಿಮ್ಮೊಳಗೆ ವಾಸಮಾಡುವನು. ವಾಗ್ದಾನಗಳೂ, ದೇವಪ್ರಸನ್ನತೆಯು ನಿಮಗುಂಟು. ಪರಲೋಕದಲ್ಲಿ ನಿಮಗಾಗಿ ವಾಸಸ್ಥಳವನ್ನು ಸಿದ್ಧಪಡಿಸಿರುವನು. ನೀವು ಕರ್ತನ ಮನೆಯಲ್ಲಿ ನಿತ್ಯಕಾಲಕ್ಕೂ ನೆಲೆಸಿರುವಿರಿ.

ಕ್ರೈಸ್ತಮಾರ್ಗದ ಎಲ್ಲಾ ನಂಬಿಕೆಗಳಲ್ಲಿ ಉನ್ನತವಾದ ನಂಬಿಕೆ "ಕರ್ತನು ನಮ್ಮೊಂದಿಗಿರುವನು" ಎಂಬ ನಂಬಿಕೆ. ಆ ನಂಬಿಕೆ ಆತನ ವಾಗ್ದಾನಗಳ ಮೂಲಕವಾಗಿಯೂ, ಸುವಾರ್ತೆಯ ಮೂಲಕವಾಗಿಯೂ ನೀವು ಪಡೆದುಕೊಳ್ಳಬಹುದು. "ನಿನ್ನ ಸಂಗಡ ಇರುವೆನು. ನಿನ್ನನ್ನು ತೊರೆಯುವದಿಲ್ಲ. ಕೈಬಿಡುವದಿಲ್ಲ. ಸ್ಥಿರಚಿತ್ತನಾಗಿರು, ಧೈರ್ಯದಿಂದಿರು" (ಯೆಹೋಶುವ 1:5,6). ಬೆಟ್ಟಗಳು ಸ್ಥಳವನ್ನು ಬಿಟ್ಟು ಹೋದಾವು, ಗುಡ್ಡಗಳು ಕದಲಿಯಾವು, ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟುಹೋಗದು. "ನನ್ನ ಸಮಾಧಾನದ ಒಪ್ಪಂದ ನಿನ್ನನ್ನು ಬಿಟ್ಟು ಹೋಗದು (ಯೆಶಾ.54:10). "ಯುಗದ ಸಮಾಪ್ತಿಯವರೆಗೆ ನಾನು ನಿಮ್ಮೊಂದಿಗಿರುವೆನು" (ಮತ್ತಾ. 28:20) ಎಂಬುದು ಕರ್ತನ ವಾಗ್ದಾನ. ಎರಡನೆಯದಾಗಿ, ಆತನ ಪುನರುತ್ಥಾನದ ನಂಬಿಕೆ. ಯೇಸುಕ್ರಿಸ್ತನು ಸತ್ತವರೊಳಗಿಂದ ಜೀವದಿಂದ ಎದ್ದದ್ದರಿಂದ ನಮಗೂ ಅಂಥಹ ನಂಬಿಕೆ ಉಂಟು. ಮರಣದ ಒಂದು ಮಧುರವಾದ ಭಾಗ, ಪುನರುತ್ಥಾನ ಹೊಂದಿದ ವಿಮೋಚಕನನ್ನು ಮುಖಾಮುಖಿಯಾಗಿ ಸಂಧಿಸುವೆವು ಎಂಬುದೇ. ಮೂರನೆಯ ನಂಬಿಕೆ ಕ್ರಿಸ್ತನ ಬರೋಣದಲ್ಲಿ ಕಾಣಲ್ಪಡುವೆನು ಎಂಬ ನಂಬಿಕೆ. "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು. ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾ. 3:2) ಎಂದು ಸತ್ಯವೇದ ಹೇಳುತ್ತದೆ.

ದೇವಮಕ್ಕಳೇ, ಕ್ರಿಸ್ತನು ಮಹಿಮೆಯಾದ ನಂಬಿಕೆಯಾಗಿ ನಿಮ್ಮೊಳಗೆ ವಾಸಿಸುವನಾ? ಆ ನಂಬಿಕೆಯನ್ನು ದೃಢವಾಗಿ ಹಿಡಿದುಕೊಳ್ಳುವಿರಾದರೆ, ಮುಂದಿನ ಕಾಲವನ್ನು ಸಂತೋಷದಿಂದ ನಿರೀಕ್ಷಿಸಬಹುದು. ನಿಮ್ಮ ಹೆಸರು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟಿರುವದು. ಬಾಡದ ಜಯಮಾಲೆ ಪರಲೋಕದ ಬಾಧ್ಯತೆ ನಿಮಗಾಗಿ ಇಡಲ್ಪಟ್ಟಿದೆ.

*ನೆನಪಿಗೆ : ದೇವರ ಸಾನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗುಂಟಾಯಿತು (ಎಫೆ. 3:12).*

ಡಿಸೆಂಬರ್ 7

## ಕ್ರಿಸ್ತನ ಮನಸ್ಸು!

ಬೆಳಿಗ್ಗೆ : ದಾನಿ. 5,6,7
ಸಂಜೆ : 2 ಯೋಹಾ. 1

ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ, ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು (1 ಕೊರಿಂ. 2:16).

ಕ್ರಿಸ್ತನು ನಿಮ್ಮೊಳಗೆ ನೆಲೆಗೊಂಡಿದ್ದರೆ, ನಿಶ್ಚಯವಾಗಿಯೇ ಕ್ರಿಸ್ತನ ಮನಸ್ಸು ನಿಮ್ಮೊಳಗಿರುವದು. ನಿಮ್ಮ ಮನಸ್ಸಿನಲ್ಲಿ ಪವಿತ್ರತೆ ನೆಲೆಗೊಂಡಿರುವದು. "ಪಕ್ಷಪಾತದಿಂದಾಗಲಿ, ಒಣ ಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದೆಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ. ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ" (ಫಿಲಿ. 2:3–5) ಎಂದು ಅಪೊ. ಪೌಲನು ಹೇಳುತ್ತಾನೆ.

ಮನಸ್ಸು ಬಹಳ ಮುಖ್ಯವಾದದ್ದು. ಒಬ್ಬನು ಯಾವ ರೀತಿ ಆಲೋಚಿಸುವನೋ ಅವನ ಜೀವಿತವೂ ಹಾಗೆಯೇ ಇರುವದು. ಮನಸ್ಸಿನಲ್ಲಿ ಆಲೋಚಿಸಿದ್ದೇ ಮಾತುಗಳಾಗಿ ಬಾಯಿಂದ ಹೊರಡುವದು. ಬಾಯಿ ಮಾತುಗಳು ನಂತರ ಕಾರ್ಯಗಳಾಗಿ ಮಾರ್ಪಡುವದು. ಆ ಕಾರ್ಯಗಳು ಅವನ ಸ್ವಭಾವವನ್ನು ಪ್ರಕಟಿಸುವದು. ಯೇಸುಕ್ರಿಸ್ತನ ಮನಸ್ಸು ತಾಳ್ಮೆಯ ದೀನತೆಯ ಮನಸ್ಸು. ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು (ಫಿಲಿ. 2:6–8) ಎಂದು ಸತ್ಯವೇದ ತಿಳಿಸುತ್ತದೆ. ತಗ್ಗಿದ ಮನಸ್ಸುಳ್ಳವರನ್ನು ದೇವರು ಉನ್ನತಿಗೆ ತರುವನು. ಆದ್ದರಿಂದಲೇ ಕರ್ತನು ಕ್ರಿಸ್ತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದನು. ಯೇಸುಕ್ರಿಸ್ತನನ್ನು ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು(ಫಿಲಿ.2:9–11).

ದೇವಮಕ್ಕಳೇ, ಕ್ರಿಸ್ತನ ಮನಸ್ಸು ನಿಮ್ಮಲ್ಲಿ ಇರಲಿ. ಆ ತಾಳ್ಮೆ ದೀನತೆಯನ್ನು ಕಂಡು ನಿಮ್ಮನ್ನು ಉನ್ನತ ಸ್ಥಾನಕ್ಕೆ ಏರಿಸುವನು. ಎಲ್ಲಿ ಹೆಮ್ಮೆಯೋ ಅಲ್ಲಿ ನಾಚಿಕೆ, ದೀನರಲ್ಲಿ ಜ್ಞಾನ (ಜ್ಞಾನೋ. 11:2).

*ನೆನಪಿಗೆ : "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಲೂಕ. 10:27).*



ಡಿಸೆಂಬರ್ 8

## ಶಾಂತಮನಸ್ಸು ವಾಸವಾಗಿರುವದು!

ಬೆಳಿಗ್ಗೆ : ದಾನಿ. 8,9,10
ಸಂಜೆ : 3 ಯೋಹಾ. 1

"ನಾನು ಕ್ರಿಸ್ತನ ಶಾಂತಮನಸ್ಸನ್ನೂ ಸಾತ್ವಿಕತ್ವವನ್ನೂ ನೆನಪಿಗೆ ತಂದುಕೊಂಡು ನಿಮಗೆ ಖಂಡಿತವಾಗಿ ಹೇಳುವೆನು" (2 ಕೊರಿಂ. 10:1).

ಕ್ರಿಸ್ತನು ನಿಮ್ಮಲ್ಲಿ ನೆಲೆಗೊಂಡಿದ್ದರೆ, ನಿಶ್ಚಯವಾಗಿಯೇ ಕ್ರಿಸ್ತನ ಶಾಂತಮನಸ್ಸು ನಿಮ್ಮಲ್ಲಿ ವಾಸವಾಗಿರುವದು. ಹಳೆಯ ಒಡಂಬಡಿಕೆಯಲ್ಲಿ ಮೋಶೆ, ಶಾಂತಗುಣವುಳ್ಳವನೆಂದು ಕರೆಯಲ್ಪಟ್ಟನು. ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ದೈವೀಕ ಶಾಂತತೆಯನ್ನು ತನ್ನ ಜೀವಿತದ ಮೂಲಕ ಪ್ರಕಟಿಸಿದನು. "ನಾನು ಸಾತ್ವಿಕನೂ, ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ, ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು" (ಮತ್ತಾ.11:29–30) ಎಂದು ಹೇಳಿರುವನು.

ನೀವು ಕ್ರಿಸ್ತನಿಗೆ ನಿಮ್ಮನ್ನು ಎಷ್ಟರಮಟ್ಟಿಗೆ ಒಪ್ಪಿಸಿಕೊಡುವಿರೋ ಅಷ್ಟರ ಮಟ್ಟಿಗೆ ಕ್ರಿಸ್ತನ ಶಾಂತ ಮನಸ್ಸು ನಿಮ್ಮೊಳಗೆ ಕ್ರಿಯೆ ನಡೆಸುವದು. ನಿಮ್ಮ ಶಕ್ತಿಗೆ ಮೀರಿ ನಿಮಗೆ ಶೋಧನೆಯನ್ನು ದೇವರು ಬರಮಾಡುವದಿಲ್ಲ (1 ಕೊರಿಂ. 10:13). ಕೆಲವು ವೇಳೆಗಳಲ್ಲಿ ಉಪದ್ರವಗಳು ಕಷ್ಟಗಳೂ ಬರುವಾಗ, ನಿಮ್ಮೊಳಗೆ ನೆಲೆಸಿರುವ ಪವಿತ್ರಾತ್ಮನು ಆತ್ಮನ ಕ್ರಿಯೆಯಾದ ಶಾಂತತೆಯನ್ನು ನಿಮ್ಮೊಳಗೆ ಹೆಚ್ಚುವಂತೆ ಮಾಡುವನು. ನೀವು ಅಂಥಹ ಸಮಯದಲ್ಲಿ ಸಹನೆಯಿಂದಿರಲು ಸಾಧ್ಯವಾಗುವದು. ತಾಳ್ಮೆ, ಶಾಂತತೆ ಇಲ್ಲದವರು ಪ್ರತಿಯೊಂದರಲ್ಲೂ ಆತುರಪಡುವರು. ಕೊನೆಯಲ್ಲಿ ಆಪತ್ತಿನಲ್ಲಿ ಸಿಕ್ಕಿಕೊಳ್ಳುವರು. ಆದರೆ, ಶಾಂತಗುಣವುಳ್ಳವರು, "ಕರ್ತನು ನೋಡಿಕೊಳ್ಳುವನು; ಕರ್ತನು ನನಗಾಗಿ ಹೋರಾಡುವನು" ಎಂದು ದೃಢವಾಗಿರುವರು. ಒಮ್ಮೆ ಒಬ್ಬ ಕ್ರೈಸ್ತ ಸಹೋದರಿ ನಾನು ಒಂದು ಹುಳಕ್ಕೆ ಸಮಾನ, ಧೂಳು ಎಂದೆಲ್ಲಾ ಹೇಳುತ್ತಲೇ ಇದ್ದಳು. ಇದನ್ನು ಗಮನಿಸುತ್ತಲೇ ಇದ್ದ ಒಬ್ಬ ತುಂಟ ಯೌವನಸ್ಥನು ಅವಳನ್ನು ಹಿಂಬಾಲಿಸಿ ಅವಳು ಹತ್ತಿದ ಬಸ್ಸನ್ನು ಅವನೂ ಹತ್ತಿದನು. ಅವಳ ಹೆಬ್ಬೆರಳನ್ನು ಕಾಲಿನಿಂದ ತುಳಿದುಬಿಟ್ಟನು. ಅದೆಲ್ಲಿತ್ತೋ ಕೋಪ ಹಾವಿನಂತೆ ಬುಸುಗುಟ್ಟುತ್ತಾ ಅವನ ಮೇಲೆ ಹರಿಹಾಯ್ದು ಬೈಯಲಾರಂಭಿಸಿದಳು. ಆಗ ಆ ಯುವಕನು "ನೀವು ನಿಮ್ಮನ್ನು ಹುಳು, ಧೂಳು ಎಂದು ಹೇಳಿ ಸಾಕ್ಷಿಕೊಟ್ಟಿರಿ. ಆದರೆ ನೀವು ಹುಳು ಅಲ್ಲ, ಬುಸುಗುಟ್ಟುವ ಹಾವು ಎಂಬುದನ್ನು ಪ್ರಕಟಿಸಿಬಿಟ್ಟಿರಿ. ಕ್ರಿಸ್ತನ ಮನಸ್ಸು ನಿಮ್ಮಲ್ಲಿಲ್ಲ" ಎಂದು ಹೇಳಿದನು.

ದೇವಮಕ್ಕಳೇ, ಎಂಥಹ ಕಷ್ಟಗಳ ಮಧ್ಯದಲ್ಲೂ ಕ್ರಿಸ್ತನ ಶಾಂತಗುಣವನ್ನು ಪ್ರಕಟಿಸಿರಿ. ಅದು ದೈವೀಕವಾದದ್ದು.

*ನೆನಪಿಗೆ : ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಿನ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ, ದೇವರ ದೃಷ್ಟಿಗೆ ಬಹುಬೆಲೆಯುಳ್ಳದ್ದೂ ಆಗಿದೆ (1 ಪೇತ್ರ. 3:4).*

ಡಿಸೆಂಬರ್ 9

## ಮಹಿಮೆ ವಾಸವಾಗಿರುವದು!

ಬೆಳಿಗ್ಗೆ : ದಾನಿ. 11, 12
ಸಂಜೆ : ಯೂದ. 1

"ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುವದು" (2 ಕೊರಿಂ. 12:9).

ನಿಮ್ಮೊಳಗೆ ವಾಸಮಾಡುವ ಕ್ರಿಸ್ತನಲ್ಲಿ ಸಕಲ ಬಲ ಮಹಿಮೆಗಳು ಉಂಟು. ಸೃಷ್ಟಿಸುವ ಶಕ್ತಿ. ವ್ಯಾಧಿಗಳನ್ನು ಗುಣಪಡಿಸುವ ಶಕ್ತಿ. ಸತ್ತವರನ್ನು ಜೀವದಿಂದ ಎಬ್ಬಿಸುವ ಶಕ್ತಿ. ಮಾತ್ರವಲ್ಲ, ಕಡೆಯವರೆಗೂ ನಿಮ್ಮನ್ನು ಕಾಪಾಡುವ ಶಕ್ತಿ ಆತನಿಗುಂಟು. ಆದ್ದರಿಂದ ನೀವು ನಂಬಿಕೆಯಿಂದ "ನನ್ನೊಳಗೆ ಒಬ್ಬನು ಇರುವನು. ಆತನು ಭೂಮ್ಯಾಕಾಶಗಳನ್ನು ಉಂಟುಮಾಡಿದ ಮಹಾ ಮಹಿಮನು. ಆದ್ದರಿಂದ ಆತನಲ್ಲಿರುವ ಬಲವೆಲ್ಲಾ ನನ್ನಲ್ಲಿಯೂ ಇರುವದು" ಎಂದು ಹೇಳಿರಿ.

ಅಪೊ. ಪೌಲನು ಒಮ್ಮೆ ಕ್ರಿಸ್ತನ ಆ ಶಕ್ತಿಯನ್ನು ತನ್ನ ಶರೀರದಲ್ಲಿ ಕಂಡುಕೊಂಡನು. ಕ್ರಿಸ್ತನ ಬಲವು ನನ್ನಲ್ಲಿ ನೆಲೆಗೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ಬಹು ಸಂತೋಷವಾಗಿ ಹೆಚ್ಚಳ ಪಡುವೆನು ಎಂದು ಹೇಳುತ್ತಾನೆ (2 ಕೊರಿಂ. 12:9). ಇಂದು ಕ್ರಿಸ್ತನು ನಮ್ಮೊಂದಿಗಿರುವನು. ನಮ್ಮೊಳಗೆ ನೆಲೆಸಿರುವನು. ಕ್ರಿಸ್ತನನ್ನು ಅಂಗೀಕರಿಸಿಕೊಂಡಿರುವ ಪ್ರತಿಯೊಬ್ಬ ಕ್ರೈಸ್ತನೂ, ಕ್ರೈಸ್ತಳೂ ತನ್ನೊಳಗೆ ಕಾರ್ಯಸಾಧಿಸುವ ಕ್ರಿಸ್ತನ ಶಕ್ತಿಯನ್ನು ಅರಿತು, ಅದನ್ನು ತನ್ನ ಜೀವಿತದಲ್ಲಿ ಪ್ರಕಟಿಸಬೇಕು, ಅನುಭವಿಸಬೇಕು (ಎಫೆ. 3:20). ಕ್ರಿಸ್ತೇಸುವಿನ ಶಕ್ತಿ, ಆತ್ಮದಲ್ಲಿ ಉಂಟಾಗುವ ಸಕಲ ಕಳವಳಗಳನ್ನೂ, ಭಯಗಳನ್ನೂ ಹೊಡೆದೋಡಿಸುವದು. ಬಲಹೀನತೆಯಲ್ಲಿ, ಕರ್ತನ ಬಲ ಪೂರ್ಣಸಾಧಕವಾಗುವದು. ಆದ್ದರಿಂದ ದುರ್ಬಲನೂ ಶೂರನೆಂದುಕೊಳ್ಳಲಿ (ಯೋವೇಲ. 3:10). ಅಪೊ. ಪೌಲನು ಈ ಕುರಿತು ಹೀಗೆ ಬರೆಯುತ್ತಾನೆ "ಬಲಾಧಿಕ್ಯವು ದೇವರಿಂದ ಬಂದದ್ದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು. ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟಿದ್ದರೂ ನಾವು ಅತಿಸಂಕಟಪಡುವವರಲ್ಲ, ದಿಕ್ಕು ಕಾಣದವರಾದರೂ ದೆಸೆಗೆಟ್ಟವರಲ್ಲ, ಹಿಂಸೆ ಪಡುವವರಾಗಿದ್ದರೂ ಕೈಬಿಡಲ್ಪಟ್ಟವರಲ್ಲ. ಕೆಡವಲ್ಪಟ್ಟವರಾಗಿದ್ದರೂ ಪ್ರಾಣನಷ್ಟ ಪಡುವವರಲ್ಲ" ಎಂದು (2 ಕೊರಿಂ.4:7–9).

ದೇವಮಕ್ಕಳೇ, ನಿಮ್ಮೊಳಗಿರುವಾತನು ಪ್ರತಿದಿನವೂ ತನ್ನ ಶಕ್ತಿಯಿಂದಲೂ, ಬಲದಿಂದಲೂ, ನಿಮ್ಮನ್ನು ಕಾಯುತ್ತಿರುವನು. ಆದ್ದರಿಂದ ನಿಮ್ಮನ್ನು ಬಲಹೀನಗೊಳಿಸುವ ಧೂಳನ್ನು ಒದರಿ ದೇವಮಹಿಮೆಯನ್ನೂ, ಶಕ್ತಿಯನ್ನೂ ಧರಿಸಿಕೊಳ್ಳಿರಿ.

*ನೆನಪಿಗೆ : ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿ. 4:13).*



ಡಿಸೆಂಬರ್ 10

## ಆತ್ಮನ ಫಲವೋ!

ಬೆಳಿಗ್ಗೆ : ಹೋಶೇಯ 1,2,3,4
ಸಂಜೆ : ಪ್ರಕಟಣೆ 1

ದೇವರಾತ್ಮನ ಫಲವೋ, "ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ" (ಗಲಾ. 5:22).

ಒಮ್ಮೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ನನ್ನೊಳಗೆ ನನಗರಿಯದಂತೆಯೇ, ದೇವರಾತ್ಮನ ಫಲಗಳೆಲ್ಲವನ್ನೂ ಪಡೆಯಬೇಕು, ಕರ್ತನಿಗೆ ಆತ್ಮನ ಫಲಗಳನ್ನು ಹೇರಳವಾಗಿ ಕೊಡಬೇಕು ಎಂಬ ಮಹದಾಶೆ ಉಂಟಾಯಿತು. ಅದೇ ವೇಳೆಯಲ್ಲಿ ನನ್ನೊಳಗೆ ಒಂದು ಸಂದೇಹ. ಒಬ್ಬನು ಒಂದೇ ಸಮಯದಲ್ಲಿ ಒಂಭತ್ತು ಫಲಗಳನ್ನೂ ತೋರಿಸಲು ಸಾಧ್ಯವಾ? ಪ್ರೀತಿಯಲ್ಲಿ ಪೂರ್ಣತೆ ಹೊಂದುವಾಗ ಇಚ್ಛಾನಿಗ್ರಹಣವಿಲ್ಲದೇ ಹೋಗಬಹುದು. ಸಂತೋಷ ಪಡುವಾಗ ಶಾಂತತೆ ಕಮ್ಮಿಯಾಗಿಬಿಡಬಹುದು. ಎಲ್ಲಾ ಫಲಗಳೂ ಒಬ್ಬನಲ್ಲಿ ಕಾಣಲು ಸಾಧ್ಯವಾ?

ಅದೇ ರೈಲುಬೋಗಿಯಲ್ಲಿ ಒಬ್ಬ ವಯಸ್ಸಾದ ದೇವಮನುಷ್ಯರು ನನ್ನ ಬಳಿ ಹೀಗೆ ಹೇಳಿದರು "ನೀವು ಪ್ರತಿಯೊಂದು ಆತ್ಮನ ಫಲಗಳಲ್ಲಿ ಪೂರ್ಣತೆಗಳಿಸಲು ಪ್ರಯತ್ನಿಸುವದು ವ್ಯರ್ಥವಾದ ಕಾರ್ಯ. ಎಲ್ಲಾ ಆತ್ಮನ ಫಲಗಳು ತುಂಬಿದ ಕ್ರಿಸ್ತನು ನಿಮ್ಮೊಳಗೆ ವಾಸವಾಗಿರುವನು. ಆತ್ಮನ ಫಲಗಳನ್ನು ಪೂರ್ಣವಾಗಿ ನೀಡುವ ಪವಿತ್ರಾತ್ಮನು ನಿಮ್ಮೊಳಗೆ ವಾಸಿಸುವನು ಆತನೇ ನಿಮ್ಮೊಳಗೆ ಎಲ್ಲಾ ಫಲಗಳು ಕಾಣಲ್ಪಡುವಂತೆ ಮಾಡುವನು" ಅಂದರು. ಹಳೆ ಒಡಂಬಡಿಕೆಯಲ್ಲಿ ಇಂದಿನಂತೆ ಪವಿತ್ರಾತ್ಮ ಅಭಿಷೇಕ ಸುರಿಸಲ್ಪಟ್ಟಿರಲಿಲ್ಲ. ಅವರು ಐಗುಪ್ತದಿಂದ ತರಲ್ಪಟ್ಟ ಒಳ್ಳೆಯ ದ್ರಾಕ್ಷೆಯ ಸಸಿಗಳು. ಹಾಲೂ ಜೇನೂ ಹರಿಯುವ ಕಾನಾನಿನಲ್ಲಿ ನೆಡಲ್ಪಟ್ಟವರಾಗಿದ್ದರು. ಕರ್ತನು ಅದಕ್ಕೆ ಬೇಲಿ ಹಾಕಿ ಭೂಮಿಯನ್ನು ಹಸನುಮಾಡಿ, ಒಳ್ಳೆಯ ದ್ರಾಕ್ಷೆ ಸಸಿಗಳನ್ನು ನೆಟ್ಟು ಬುರುಜು ಕಟ್ಟಿ ತೊಟ್ಟಿಯನ್ನು ಕೊರೆದು ಅದು ಒಳ್ಳೆಯ ಫಲವನ್ನು ಕೊಡುವದೆಂದು ಕಾದಿದ್ದನು. ಅದೋ, ಹೊಲಸು ಹಣ್ಣನ್ನು ನೀಡಿತು (ಯೆಶಾ. 5:2). ಆದರೆ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನೇ ನಿಜವಾದ ದ್ರಾಕ್ಷೆ ಬಳ್ಳಿಯಾಗಿರುವನು. ನಾವು ಆತನಲ್ಲಿಯೇ ಪೂರ್ಣವಾಗಿ ಆಶ್ರಯಿಸಿರುವ ಕೊಂಬೆಗಳಾಗಿರುವೆವು. ಮಾತ್ರವಲ್ಲ, ನೀರಿನ ಕಾಲುವೆಗಳ ಬಳಿ ನೆಡಲ್ಪಟ್ಟ ಫಲ ನೀಡುವ ಗಿಡಗಳಾಗಿರುವದರಿಂದ ಒಳ್ಳೆಯ ಫಲಗಳನ್ನು ಹೇರಳವಾಗಿ ನೀಡಲು ಸಾಧ್ಯ.

ದೇವಮಕ್ಕಳೇ, "ಯೇಸುಕ್ರಿಸ್ತನು ಹೇಳಿದ್ದಾನೆ, ನೀವು ನನ್ನಲ್ಲಿ ನೆಲೆಗೊಂಡು ಇರಿ. ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ. ನೀವು ಕೊಂಬೆಗಳು. ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು (ಯೋಹಾನ. 15:4,5) ಎಂದು.

*ನೆನಪಿಗೆ : ಪಟ್ಟಣದ ಬೀದಿಯ ಮಧ್ಯದಲ್ಲಿ ಆ ನದಿಯ ಉಭಯ ಪಾರ್ಶ್ವಗಳಲ್ಲಿ ಹನ್ನೆರಡು ತರದ ಫಲಗಳನ್ನು ಕೊಡುವ ಜೀವವೃಕ್ಷವಿತ್ತು (ಪ್ರಕ. 22:2).*

## ಡಿಸೆಂಬರ್ 11 ಆರೋಗ್ಯ ವಾಸವಾಗಿರುವದು!

ಬೆಳಿಗ್ಗೆ : ಹೋಶೇಯ 5,6,7,8
ಸಂಜೆ : ಪ್ರಕ. 2

"ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ. ನಿನ್ನನ್ನು ರಕ್ಷಿಸುವನು... ಉಲ್ಲಾಸಿಸುವನು." (ಚೆಫನ್ಯ 3:17).

ಇತರರಿಗೆ ಕನಿಕರ ತುಂಬಿದವರಾಗಿ ಸೇವೆ ಮಾಡುತ್ತಿದ್ದ ಒಬ್ಬ ವೈದ್ಯರು ಕಠಿಣವಾದ ವ್ಯಾಧಿಗೆ ಒಳಗಾಗಿ ಆಸ್ಪತ್ರೆಗೆ ದಾಖಲಾದರು. ಅವರಿಗೆ ಬಂದಿದ್ದ ವ್ಯಾಧಿ ಎಂಥದೆಂದು ವೈದ್ಯರುಗಳಿಗೆ ತಿಳಿಯದಾಯಿತು. ಅವರ ಶರೀರ ದಿನೇ ದಿನೇ ಕೊಳೆತು ನಾರಲಾರಂಭಿಸಿತು. ಆ ವೈದ್ಯರಿಗೆ ಕರ್ತನು ತನ್ನನ್ನು ಗುಣಪಡಿಸಲು ಶಕ್ತನಾಗಿರುವನು ಎಂಬ ನಂಬಿಕೆ ಇದ್ದರೂ ಹೇಗೆ ತನ್ನನ್ನು ಈ ಸ್ಥಿತಿಯಲ್ಲಿ ಗುಣಪಡಿಸಬಲ್ಲನು ಎಂಬ ಸಂದೇಹ ಬಂತು.

ಆಗ ಆತನ ಪತ್ನಿ ಸತ್ಯವೇದವನ್ನು ಗಟ್ಟಿಯಾಗಿ ಓದುತ್ತಿದ್ದಳು. ಚೆಫನ್ಯ 3:17ನೇ ವಾಕ್ಯ ಅಲ್ಲಿ ಬಂತು "ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ. ನಿನ್ನನ್ನು ರಕ್ಷಿಸುವನು, ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು" ಎಂಬ ಮಾತು ಆ ವೈದ್ಯರ ಆಂತರ್ಯವನ್ನು ಮುಟ್ಟಿತು. ಆ ವಾಕ್ಯವನ್ನು ಪುನಃ ಪುನಃ ಓದುವಂತೆ ತನ್ನ ಪತ್ನಿಯ ಬಳಿ ಹೇಳಿದರು. "ನನ್ನ ಶರೀರ ಕೊಳೆತರೂ, ನನ್ನೊಳಗಿರುವವನು ಬಲಶಾಲಿಯಾಗಿರುವನು. ನನ್ನೊಳಗೆ ಇರುವವನು ಪೂರ್ಣ ಆರೋಗ್ಯದಿಂದ ತುಂಬಿದವನು. ನನ್ನೊಳಗಿರುವವನು ಅದ್ಭುತಗಳನ್ನು ಮಾಡುವವನು. ಕನಿಕರವುಳ್ಳವನು. ಅಂದು, ಇಂದೂ, ಎಂದೆಂದಿಗೂ ಮಾರ್ಪಡದವನು. ಎರಡು ಸಾವಿರ ವರ್ಷಗಳ ಹಿಂದೆ, ಯಾವ ಅದ್ಭುತಗಳನ್ನು ಮಾಡಿದನೋ ಅದೇ ಕ್ರಿಸ್ತನು ಇಂದಿಗೂ ನನ್ನೊಳಗೆ ವಾಸಮಾಡಿ ನನ್ನನ್ನು ಗುಣಪಡಿಸಿ ಆರೋಗ್ಯವನ್ನು ಬರಮಾಡುವನು ಎಂದು ಹೇಳಿ ಉಲ್ಲಾಸಿಸಿದನು. ಎಂಥ ಆಶ್ಚರ್ಯ, ಸ್ವಲ್ಪ ಸಮಯದಲ್ಲೇ ಕರ್ತನು ಅವನನ್ನು ಗುಣಪಡಿಸಿದನು. ಆ ವೈದ್ಯರು ಸಾಕ್ಷಿಕೊಡುವಾಗ "ನನ್ನೊಳಗೆ ಕ್ರಿಸ್ತನು ತಂಗಿದ್ದರಿಂದ ವ್ಯಾಧಿ ಹೊರಗೆ ಬರಬೇಕಾಯಿತು. ಕ್ರಿಸ್ತನೂ, ವ್ಯಾಧಿಯೂ ಒಂದೇ ಸ್ಥಳದಲ್ಲಿ ವಾಸಿಸಲಾಗದು" ಎಂದು ಹೇಳಿದರು.

ದೇವಮಕ್ಕಳೇ, ಔಷಧಿಗಳು, ಟಾನಿಕ್‌ಗಳು ನಿಮ್ಮೊಳಗೆ ಹೋಗಿ ನಿಮ್ಮನ್ನು ಗುಣಪಡಿಸುವದು ಎಂದು ನಂಬುವದಕ್ಕಿಂತ "ಕ್ರಿಸ್ತನು ನನ್ನೊಳಗೆ ವಾಸ ಮಾಡಿ, ನನ್ನನ್ನು ಗುಣಪಡಿಸಿದನು ಎಂದು ನಂಬಿರಿ". ಆಗ ನಿಮ್ಮ ಶರೀರದಲ್ಲಿ ಆರೋಗ್ಯ ಉಂಟಾಗುವದು. ವೈದ್ಯರು ನಿಮಗೆ ಔಷಧಿ ಕೊಟ್ಟರೂ ಗುಣ ಪಡಿಸುವಾತನು ನಮ್ಮ ಘನವೈದ್ಯನಾದ ಕರ್ತನೊಬ್ಬನೇ. ಆದ್ದರಿಂದ ಕಳವಳಗೊಳ್ಳದಿರಿ. ಇಂದು ನಿಮಗೆ ಕರ್ತನು ಒಂದು ಅದ್ಭುತವನ್ನು ಮಾಡುವನು.

*ನೆನಪಿಗೆ : "ನನ್ನ ಮಾತಿಗೆ ಕಿವಿಗೊಡುವನಾದರೋ ಸ್ವಸ್ಥವಾಗಿರುತ್ತಾ, ಯಾವ ಕೇಡಿಗೂ ಭಯಪಡದೆ ಸುರಕ್ಷಿತನಾಗಿರುವನು" (ಜ್ಞಾನೋ. 1:33)*



## ಡಿಸೆಂಬರ್ 12 ದೇವರ ರಹಸ್ಯವಾಸವಾಗಿರುವದು!

ಬೆಳಿಗ್ಗೆ : ಹೋಶೇಯ 9,10,11
ಸಂಜೆ : ಪ್ರಕ. 3

"ಗುಪ್ತವಾಗಿದ್ದ ಒಂದು ಸಂಗತಿ ದೈವ ಪ್ರಕಟನೆಯಿಂದ ನನಗೆ ತಿಳಿಸಲ್ಪಟ್ಟಿತು" (ಎಫೆ.3:3).

ಕ್ರಿಸ್ತನು ನಿಮ್ಮೊಳಗೆ ಇರುವದಾದರೆ (ಎಫೆ. 3:17) ಕರ್ತನ ರಹಸ್ಯಗಳನ್ನು ನೀವು ಅರಿತುಕೊಳ್ಳುವಿರಿ. ಅಪೊ. ಪೌಲನು ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವನೆಂದು ಕರೆಯಲ್ಪಟ್ಟಿರುವನು (1 ಕೊರಿಂ.4:1). ನಿಮ್ಮ ಸುತ್ತಲೂ ಅನೇಕನೇಕ ರಹಸ್ಯ ಸಂಗತಿಗಳು ಇರುವವು. ಅವುಗಳಲ್ಲಿ ದೇವರರಹಸ್ಯವೂ ಒಂದು. ಇದು ಸ್ವತಃ ಕರ್ತನಿಂದಲೇ ಪ್ರಕಟವಾಗಬೇಕೇ ಹೊರತು ಬೇರೆ ಯಾರಿಂದಲೂ ತಿಳಿಸಲಾಗದಂಥ ರಹಸ್ಯ.

ರಹಸ್ಯ ಎಂದರೆ, 'ಬಹಿರಂಗವಾಗದ ಗುಪ್ತ ಸಂಗತಿ' ಎಂದು ಅರ್ಥ. ಒಬ್ಬ ದೇವ ಸೇವಕರು "ರಹಸ್ಯಗಳೊಳಗೆ ಮರೆಯಾಗಿರುವ ಮಹಾ ರಹಸ್ಯ ಯಾವದು? ನೀವು ಕ್ರಿಸ್ತನಲ್ಲಿ ನೆಲೆಗೊಂಡಿರುವಿರಿ. ಕ್ರಿಸ್ತನು ನಿಮ್ಮಲ್ಲಿ ನೆಲೆಗೊಂಡಿರುವನು. ಇದನ್ನು ಅರಿತುಕೊಳ್ಳಬಹುದು. ಆದರೆ ಒಂದೇ ಸಮಯದಲ್ಲಿ ನೀವು ಕ್ರಿಸ್ತನಲ್ಲಿ ಆತನು ನಿಮ್ಮೊಳಗೆ ವಾಸಮಾಡುವದು ಹೇಗೆ? ಎಂಬ ಪ್ರಶ್ನೆ ಕೇಳಿ ಎಲ್ಲರನ್ನೂ ಚಿಂತಿಸುವಂತೆ ಮಾಡಿದರು. ನಂತರ ಆ ಸೇವಕರೇ, "ನೀರು ತುಂಬಿದ ಒಂದು ಶೀಷೆಯನ್ನು ನೀರು ತುಂಬಿದ ಒಂದು ಬಾವಿಯೊಳಗೆ ಅದನ್ನು ಬಿಸಾಡಿದರು. ಈಗಿನ ಸ್ಥಿತಿ ಏನು? ಶೀಷೆಯೊಳಗೆ ನೀರಾ ನೀರಿನಲ್ಲಿ ಶೀಷೆಯಾ. ಇದೇ ರೀತಿ ನೀವು ಕ್ರಿಸ್ತನಲ್ಲಿ, ಕ್ರಿಸ್ತನು ನಿಮ್ಮಲ್ಲಿ ಇರುವ ರಹಸ್ಯ" ಎಂದು ವಿವರಿಸಿದರು. ಹಳೆ ಒಡಂಬಡಿಕೆಯಲ್ಲಿ ದೇವರು ಯೆಹೂದ ಗೋತ್ರವನ್ನು ತನಗೆಂದು ಆರಿಸಿಕೊಂಡನು (ಕೀರ್ತ. 78:68). ನಾವು ಯೆಹೂದ್ಯರಲ್ಲ, ಅನ್ಯಜನಾಂಗದವರು. ನಾವು ಇಸ್ರಾಯೇಲ್ಯರೊಂದಿಗೆ ಸಹ ಬಾಧ್ಯಸ್ಥರಾಗಿಯೂ, ವಾಗ್ದಾನಗಳೆಲ್ಲದಕ್ಕೂ ಬಾಧ್ಯಸ್ಥರಾಗಿಯೂ ಇರುವೆವು. "ಕ್ರಿಸ್ತನು ನಮ್ಮೊಳಗೆ, ನಾವು ಕ್ರಿಸ್ತನಲ್ಲಿ" ಎಂಬ ಈ ಸತ್ಯದಿಂದ ಈ ಒಂದು ದೊಡ್ಡ ಭಾಗ್ಯ ನಮಗೆ ಸಿಗುವದು.

ದೇವಮಕ್ಕಳೇ, ಕ್ರಿಸ್ತನನ್ನು ನೀವು ಎಂದು ಅಂಗೀಕರಿಸಿಕೊಂಡಿರೋ, ಅಂದೇ ನಿಮ್ಮೊಳಗೆ ಕ್ರಿಸ್ತನು ಬರುವನು. ಇಸ್ರಾಯೇಲ್ಯರೊಂದಿಗೆ ಸಹ ಭಾಗಿಗಳಾಗುವಿರಿ. ಅದೇ ವೇಳೆಯಲ್ಲಿ ಕ್ರಿಸ್ತನಲ್ಲಿರುವ ಎಲ್ಲಾ ಆಶೀರ್ವಾದಗಳನ್ನೂ ನೀವು ನಿಮ್ಮದಾಗಿಸಿಕೊಳ್ಳುವಿರಿ. ಆದ್ದರಿಂದ ಕ್ರಿಸ್ತನು ನಿಮ್ಮೊಳಗೆ ವಾಸವಾಗಿರುವದು ಬಹು ಅಗತ್ಯ. ಆಗಲೇ ನೀವು ದೇವರ ಸಕಲ ಆಶೀರ್ವಾದಗಳನ್ನೂ ಪಡೆದುಕೊಳ್ಳಲು ಸಾಧ್ಯ.

*ನೆನಪಿಗೆ : "ಈ ರಹಸ್ಯ ಯಾವದೆಂದರೆ, ಅನ್ಯ ಜನರು ಸುವಾರ್ತೆಯ ಮೂಲಕ ಕ್ರಿಸ್ತಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ, ಒಂದೇ ದೇಹದೊಳಗಣ ಅಂಗಗಳೂ, ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬುದೇ" (ಎಫೆ.3:6).*

ಡಿಸೆಂಬರ್ 13

## ವಾಕ್ಯ ನೆಲೆಗೊಂಡಿರುವದು!

ಬೆಳಿಗ್ಗೆ : ಹೋಶೇಯ 12,13,14
ಸಂಜೆ : ಪ್ರಕ. 4

"ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಲಿ" (ಕೊಲೊ. 3:16).

ಯಾರ ಹೃದಯಲ್ಲಿ ಕ್ರಿಸ್ತನು ವಾಸವಾಗಿರುವನೋ ಅವರೊಳಗೆ ಆತನ ವಾಕ್ಯವು ಸಮೃದ್ಧಿಯಾಗಿ ನೆಲೆಗೊಂಡಿರುವದು. ಕ್ರಿಸ್ತನ ವಾಕ್ಯವು ಎಂಥದ್ದು? ಅದು ಆತ್ಮವೂ ಜೀವವೂ ಆಗಿರುವದು (ಯೋಹಾ. 6:63). ಆತ್ಮವಾಗಿರುವದು ಉಜ್ಜೀವನಗೊಳಿಸುವಂಥದ್ದು. ಆ ವಾಕ್ಯವು ಓದುವವರನ್ನು ದೃಢಪಡಿಸುವಂಥದ್ದು (1 ಥೆಸ. 3:13). ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿದೆ (2 ತಿಮೋ. 3:15). ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳದ್ದಾಗಿರುವದು (ಯಾಕೋ. 1:21).

ಯೇಸುಕ್ರಿಸ್ತನು ತನ್ನ ಹೃದಯವೆಂಬ ಬೊಕ್ಕಸದಲ್ಲಿ ಸತ್ಯವೇದವಾಕ್ಯಗಳನ್ನು ಸಮೃದ್ಧಿಯಾಗಿ ತುಂಬಿಕೊಂಡಿದ್ದನು. ಸೈತಾನನು ಶೋಧಿಸಲು ಬಂದಾಗ, ಪ್ರತಿಯೊಂದು ಶೋಧನೆಗಳಿಗೂ ತಕ್ಕ ಉತ್ತರವನ್ನು ವೇದ ವಾಕ್ಯಗಳ ಮೂಲಕ ಎತ್ತಿತೋರಿಸಿ ಅವನನ್ನು ಜಯಿಸಿದನು. "ಈ ಕಲ್ಲುಗಳನ್ನು ರೊಟ್ಟಿ ಮಾಡಿ ತಿನ್ನು ಎಂದು ಸೈತಾನನು ಹೇಳಿದಾಗ, ಕೂಡಲೇ ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ. ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು" ಎಂದು ಉತ್ತರ ನೀಡಿದನು (ಮತ್ತಾ. 4:4). ಕ್ರಿಸ್ತನ ವಾಕ್ಯಗಳನ್ನು ಕೇಳುವವರು ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಅದನ್ನು ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ (ಲೂಕ. 8:15). ದೇವರ ವಾಕ್ಯಗಳು ಸಮೃದ್ಧಿಯಾಗೆ ನಿಮ್ಮೊಳಗೆ ವಾಸಿಸಲಿ. ಕರ್ತನು ತನ್ನ ವಾಕ್ಯಗಳ ಮೂಲಕ ನಿಮ್ಮೊಂದಿಗೆ ಮಾತಾಡುವಾಗ, ನಿಮ್ಮ ಹೃದಯವೆಂಬ ಬೊಕ್ಕಸದಲ್ಲಿ ಅದನ್ನು ಶೇಖರಿಸಿ ಇಟ್ಟುಕೊಳ್ಳಿರಿ. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ (ಮತ್ತಾಯ. 12:35). ಸಮಯೋಚಿತವಾದ ಮಾತುಗಳು ಬೆಳ್ಳಿಯ ನಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ (ಜ್ಞಾನೋ. 25:11).

ದೇವಮಕ್ಕಳೇ, ಸತ್ಯವೇದ ವಾಕ್ಯಗಳನ್ನು ಕೇಳುವಾಗ ಓದುವಾಗ ಅದು ಕರ್ತನ ಬಳಿಯಿಂದ ಬರುವ ಮಾತುಗಳೆಂದೇ ಅಂಗೀಕರಿಸಿಕೊಳ್ಳಿರಿ. ಆಗ ಅದು ನಿಮ್ಮೊಳಗೆ ಫಲ ನೀಡುವದನ್ನು ಅರಿತುಕೊಳ್ಳುವಿರಿ. ಇದು ಅನೇಕ ದೇವಸೇವಕರ ಅನುಭವವೂ ಆಗಿದೆ.

*ನೆನಪಿಗೆ : ಅವುಗಳನ್ನು ಹೊಂದುವವರಿಗೆ ಅವು ಜೀವವು, ದೇಹಕ್ಕೆಲ್ಲಾ ಅವೇ ಆರೋಗ್ಯವು (ಜ್ಞಾನೋ. 4:22).*



ಡಿಸೆಂಬರ್ 14

## ನೆಲೆಗೊಂಡಿದ್ದರೆ ಮಾತಾಡುವನು!

ಬೆಳಿಗ್ಗೆ : ಯೋವೇಲ 1,2,3
ಸಂಜೆ : ಪ್ರಕ. 5

ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮೂಲಕವಾಗಿ ಮಾತಾಡುವದು (ಮತ್ತಾ. 10:20).

ತಂದೆ ದೇವರ ಆತ್ಮವು ನಿಮ್ಮೊಳಗೆ ನೆಲೆಗೊಂಡಿದ್ದರೆ, ಅರಸರ ಮುಂದೆಯೂ ಯಾಜಕರ ಮುಂದೆಯೂ ನಿಲ್ಲುವಾಗ ಏನು ಮಾತಾಡಬೇಕು? ಹೇಗೆ ಮಾತಾಡಬೇಕು ಎಂಬುದರ ಕುರಿತು ಚಿಂತಿಸಬೇಕಾಗಿಲ್ಲ. ಕ್ರಿಸ್ತನು ವಾಗ್ದಾನ ಮಾಡಿ "ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮೂಲಕ ಮಾತಾಡುವನು" ಎಂದು ಹೇಳಿರುವನು.

ಪ್ರತಿದಿನವೂ ನಾವು ಅನೇಕ ಕಾರ್ಯಗಳನ್ನೂ, ವಿಚಾರಗಳನ್ನೂ ಕುರಿತು ಮಾತಾಡುತ್ತೇವೆ. ಒಬ್ಬ ಗಂಡಸು ದಿನಕ್ಕೆ ಸುಮಾರು 29,000 ಪದಗಳನ್ನು, ಒಬ್ಬ ಹೆಂಗಸು 35,000 ಪದಗಳನ್ನು ಉಪಯೋಗಿಸಿ ಮಾತಾಡುವರೆಂದು ಲೆಕ್ಕಾಚಾರ ಮಾಡಿರುವರು. ಅವುಗಳಲ್ಲಿ ವಿವಿಧ ರೀತಿಯ ಮಾತುಗಳಿರುವವು. ಕೆಲವು ವ್ಯರ್ಥವಾದ ಮಾತುಗಳು, ಕೆಲವು ಇತರರನ್ನು ದೂಷಿಸುತ್ತಾ ತಾವೇ ನೀತಿವಂತರೆಂದು ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುವ ಮಾತುಗಳು. ಹೀಗೆ ಅಧಿಕವಾಗಿ ಬೇಡದ ಮಾತುಗಳನ್ನೇ ಆಡುತ್ತೇವೆ. "ಮಾತಾಳಿಗೆ ಪಾಪ ತಪ್ಪದು, ಮೌನಿಯು ಮತಿವಂತ" (ಜ್ಞಾನೋ.10:19) ಎಂದು ಸತ್ಯವೇದ ಹೇಳುತ್ತದೆ. ಕೆಲವು ವೇಳೆ ಅಯ್ಯೋ ತಪ್ಪಾಗಿ ಮಾತಾಡಿಬಿಟ್ಟೆ ಎಂದು ವ್ಯಥೆಪಡುತ್ತೇವೆ. ನಮ್ಮ ಮನಸ್ಸಾಕ್ಷಿಯೇ ನೀನು ಮಾತಾಡಿದ್ದು ತಪ್ಪೆಂದು ತಿಳಿಯಪಡಿಸುವದು. ಇದರಿಂದ ಪಾಪದ ಭಾರ ಹೆಚ್ಚುತ್ತಲೇ ಹೋಗುವದು. ಆದ್ದರಿಂದ ನೀವು ಮಾತಾಡುವಾಗ, ದೇವರ ಸಹಾಯವನ್ನು ಬಯಸಿರಿ. ದೇವರಾತ್ಮನು ಮಾತಾಡುವದಾದರೆ ಯಾವಾಗಲೂ ದೇವರ ಚಿತ್ತದಂತೆ ಮಾತಾಡುವನು. ಮಾತಾಡಬೇಕಾದದ್ದನ್ನೇ ಮಾತಾಡುವನು. ಸ್ತೆಫನನ ಮಾತಿನಲ್ಲಿ ಕಂಡುಬಂದ ಜ್ಞಾನವನ್ನು ಪವಿತ್ರಾತ್ಮ ಶಕ್ತಿಯನ್ನೂ ಅವನ ಶತ್ರುಗಳು ಎದುರಿಸಲಾರದೆ ಹೋದರು (ಅ.ಕೃ. 6:10) ಎಂದು ಸತ್ಯವೇದ ಹೇಳುತ್ತದೆ. ಪ್ರವಾದಿಯಾದ ಯೆಶಾಯನ ಅನುಭವ ಏನಾಗಿತ್ತು? "ಬಳಲಿಹೋದವರನ್ನು ಮಾತುಗಳಿಂದ ಸುಧಾರಿಸುವದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ಯೆಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ. ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ ಎಂದು ಹೇಳುತ್ತಾನೆ (ಯೆಶಾ. 50:4).

ದೇವಮಕ್ಕಳೇ, ಕ್ರಿಸ್ತನು ನಿಮ್ಮೊಳಗೆ ನೆಲೆಗೊಂಡಿರುವದರಿಂದ ಎಲ್ಲವನ್ನೂ ಆತನ ಕರಗಳಲ್ಲಿ ಒಪ್ಪಿಸಿರಿ. ಆತನು ನಿಮಗಾಗಿ ಮಾತಾಡುವನು, ಎಲ್ಲವನ್ನೂ ಮಾಡಿ ಮುಗಿಸುವನು.

*ನೆನಪಿಗೆ : ಯೆಹೋವನ ಆತ್ಮವು ನನ್ನಲ್ಲಿ ಉಸುರಿತು. ಆತನ ವಾಕ್ಯವು ನನ್ನ ಬಾಯಲ್ಲಿತ್ತು (2 ಸಮು. 23:2).*

ಡಿಸೆಂಬರ್ 15

## ಮಹಿಮೆ ನೆಲೆಗೊಂಡಿರುವದು!

ಬೆಳಿಗ್ಗೆ : ಆಮೋಸ 1,2,3
ಸಂಜೆ : ಪ್ರಕ. 6

ತೇಜೋಮಯವಾದ ಆತ್ಮನಾಗಿರುವ ದೇವರಾತ್ಮನು ನಿಮ್ಮಲ್ಲಿ ನೆಲೆಗೊಂಡಿದ್ದಾನಲ್ಲಾ (1 ಪೇತ್ರ 4:14).

"ತಂದೆಯಾದ ದೇವರು ಮಹಿಮೆಯ ತಂದೆ" ಎಂದು ಕರೆಯಲ್ಪಡುವನು. ಮೊಟ್ಟಮೊದಲು ಮಹಿಮೆಯ ದೇವರಾಗಿ ಅಬ್ರಹಾಮನಿಗೆ ದರ್ಶನಕೊಟ್ಟನು (ಅ.ಕೃ. 7:2). ಯೇಸುಕ್ರಿಸ್ತನು ಎಂಥವನು? ಆತನು ತಂದೆಯ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿರುವನು (ಇಬ್ರಿ. 1:3). ರೂಪಾಂತರ ಬೆಟ್ಟದಲ್ಲಿ ತನ್ನ ಶಿಷ್ಯರ ಮುಂದೆ ತನ್ನ ಪ್ರಭಾವಸ್ವರೂಪವನ್ನು ತೋರ್ಪಡಿಸಿದನು (ಮತ್ತಾ. 17:2). ಅಪೊ. ಯೋಹಾನನು ಬರೆಯುತ್ತಾನೆ– "ಆ ವಾಕ್ಯವೆಂಬಾತನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ" (ಯೋಹಾ.1:14) ಎಂದು.

ಮಹಿಮೆಯುಳ್ಳ ದೇವರಾತ್ಮನಿಗೆ ಒಂದು ಉದ್ದೇಶವುಂಟು. ನಿಮ್ಮನ್ನು ಕ್ರಿಸ್ತನಿಗಾಗಿ ಸುಕ್ಕೂ ಕಳಂಕವೂ ಇಲ್ಲದ ಶುದ್ಧ ಮದುವಣಗಿತ್ತಿಯಾಗಿಸಬೇಕು. ಎರಡನೆಯದಾಗಿ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರಾಗಬೇಕು ಎಂಬುದೇ (2 ಕೊರಿಂ. 3:18). ಸತ್ತವರ ಪುನರುತ್ಥಾನವೂ ಹೀಗೆಯೇ ಇರುವದು. "ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ನಿರ್ಲಯಾವಸ್ಥೆಯಲ್ಲಿ ಎದ್ದು ಬರುವದು. ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ ಮಹಿಮೆಯಲ್ಲಿ ಎದ್ದುಬರುವದು" (1 ಕೊರಿಂ. 15:42). ಪರಲೋಕದಿಂದ ಬಂದವನು ಎಂಥವನೋ, ಪರಲೋಕಕ್ಕೆ ಸಂಬಂಧಪಟ್ಟವರೂ ಅಂಥವರೇ (1 ಕೊರಿಂ. 15:48). ಆತನ ಬರುವಿಕೆಯಲ್ಲಿ ಆತನ ಸಾರೂಪ್ಯವನ್ನು ಧರಿಸಿಕೊಳ್ಳುವೆವು (1 ಕೊರಿಂ. 15:49).

ದೇವಮಕ್ಕಳೇ, ನೀವು ಕಳೆಯುವ ಒಂದೊಂದು ವರ್ಷವೂ ಒಂದೊಂದು ತಿಂಗಳು, ಒಂದೊಂದು ದಿನವೂ ಸಮಾಧಿಯನ್ನು ದೃಷ್ಟಿಸುತ್ತಾ ಅಲ್ಲ, ಕ್ರಿಸ್ತನ ಮಹಿಮೆಯನ್ನು ಮುಖಾಮುಖಿ ಕಂಡು ಮಹಿಮೆಯ ಮೇಲೆ ಮಹಿಮೆ ಹೊಂದುವ ಆ ದಿನವನ್ನು ದೃಷ್ಟಿಸುತ್ತಾ ಓಡುತ್ತಿರುವಿರಿ. ಅದು ಎಂಥಹ ಭಾಗ್ಯಕರವಾದ ಸಂತೋಷಕರವಾದ ದಿನ. ಕ್ರಿಸ್ತನ ಮಹಿಮೆ ಪ್ರಕಟಗೊಳ್ಳುವಾಗ ನೀವೂ ಸಂತೋಷಿಸುವಂತೆ ಆತನ ಬಾಧೆಗಳಲ್ಲಿ ನೀವೂ ಪಾಲುದಾರರಾಗಿರುವದರಿಂದ ಸಂತೋಷಪಡಿರಿ.

*ನೆನಪಿಗೆ : ನಿಮ್ಮನ್ನು ಕರೆಯುವವನು ನಂಬಿಗಸ್ತನು. ಆತನು ತನ್ನ ಕಾರ್ಯವನ್ನು ಸಾಧಿಸುವನು (1 ಥೆಸ. 5:24).*



ಡಿಸೆಂಬರ್ 16

## ದೇವರಾತ್ಮನ ಪ್ರಾರ್ಥನೆ!

ಬೆಳಿಗ್ಗೆ : ಆಮೋಸ 4,5,6
ಸಂಜೆ : ಪ್ರಕ. 7

ಹಾಗೆಯೇ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ (ರೋಮಾ.8:26).

ನಿಮ್ಮೊಳಗೆ ನೆಲೆಗೊಂಡಿರುವ ದೇವರಾತ್ಮನು ಪ್ರಾರ್ಥನಾವೀರನು. ಆತನು ನಿಮ್ಮೊಳಗೆ ನೆಲೆಗೊಳ್ಳಲು ಬರುವಾಗ, ಮೊದಲು ಮಾಡುವ ಕಾರ್ಯ ನಿಮ್ಮ ಶರೀರವನ್ನು ತನ್ನ ಆಲಯವನ್ನಾಗಿ ಮಾಡುವನು. ಪ್ರಾರ್ಥನಾಲಯವನ್ನಾಗಿಸುವನು. ನಂತರ ನಿಮ್ಮೊಳಗಿದ್ದು ಪ್ರಾರ್ಥಿಸಲಾರಂಭಿಸುವನು. ನೀವು ಪ್ರಾರ್ಥಿಸುವಂತೆ ಪರಲೋಕದ ಅನ್ಯ ಭಾಷೆಯನ್ನು ನಿಮ್ಮೊಳಗಿಡುವನು. ಆತನು ನಿಮ್ಮೊಳಗಿದ್ದು ಮಾತಿಲ್ಲದ ನರಳಾಟದಿಂದ ಪ್ರಾರ್ಥಿಸಲಾರಂಭಿಸುವನು.

ನಿಮಗೆ ತಕ್ಕ ರೀತಿಯಲ್ಲಿ ವಿಜ್ಞಾಪನೆ ಮಾಡುವದು ಹೇಗೆ? ಏನು ಬೇಡಿಕೊಳ್ಳಬೇಕು ಎಂಬುದು ಗೊತ್ತಿಲ್ಲದೆ ಇರಬಹುದು. ದೇವರ ಚಿತ್ತಕ್ಕನುಸಾರವಾಗಿ ಪ್ರಾರ್ಥಿಸಲು ಅರಿಯದವರಾಗಿರಬಹುದು. ಅಂಥಹ ಸಮಯಗಳಲ್ಲಿ ದೇವರಾತ್ಮನನ್ನು ಕರೆಯಿರಿ. ದಯಮಾಡಿ ನನಗಾಗಿ ನೀನೇ ಮಾತಿಲ್ಲದ ನರಳಾಟದಿಂದ ಪ್ರಾರ್ಥಿಸಿ, ನನ್ನ ಸಮಸ್ಯೆಗಳಿಗೆ ಉತ್ತರ ತಂದುಕೊಡು ಎಂದು ಕೇಳಿರಿ. ನಿಮ್ಮನ್ನು ಪರಿಶುದ್ಧ ಪಾತ್ರೆಗಳಾಗಿ ಆತನ ಕರಗಳಲ್ಲಿ ಒಪ್ಪಿಸಿಕೊಡಿರಿ. ಪವಿತ್ರಾತ್ಮನೊಂದಿಗೆ ಕೂಡಿ ಪ್ರಾರ್ಥಿಸುವದು ಎಷ್ಟೊಂದು ಭಾಗ್ಯಕರವಾದದ್ದು! ನಿಮ್ಮೊಳಗೆ ಆತನು ಪರಾಕ್ರಮಶಾಲಿಯಾಗಿ ಎದ್ದೇಳುವನಾದರೆ, ಯಾವ ಶತ್ರುವಿನ ಬಲವೂ ನಿಮ್ಮನ್ನು ಜಯಿಸಲಾರದು. ಕುಟುಂಬದ ವಿರುದ್ಧವಾಗಿ ಯಾವ ದುಷ್ಟಶಕ್ತಿಯೂ ನಿಲ್ಲಲಾಗದು. ಬಿರುಗಾಳಿಯಿಂದ ಹೊಡೆಯಲ್ಪಟ್ಟು ಇಕ್ಕಟ್ಟಿನಲ್ಲಿ ಹರಿಯುವ ತೊರೆಯಂತೆ ರಭಸದಿಂದ ಆತನು ನಿಮ್ಮ ಸಹಾಯಕ್ಕೆ ಬರುವನು (ಯೆಶಾ.59:19). ನಿಮ್ಮ ಪಕ್ಕದಲ್ಲಿ ಸ್ನೇಹಿತನಂತೆ, ಪಾಲುಗಾರನಂತೆ ಇರುವಾತನು ಶತ್ರುವಿನ ಬಲವನ್ನು ಮುರಿಯಲು ಪರಾಕ್ರಮಶಾಲಿಯಾಗಿ ಎದ್ದೇಳುವನು.

ದೇವಮಕ್ಕಳೇ, ಪವಿತ್ರಾತ್ಮನೊಂದಿಗೆ ಕೂಡಿ ಪ್ರಾರ್ಥಿಸುವಿರಾದರೆ, ನಿಮ್ಮ ಪ್ರಾರ್ಥನಾಜೀವಿತ ವ್ಯತ್ಯಾಸವಾಗಿರುವದು. ಯುದ್ಧರಂಗದಲ್ಲಿ ಸೈನಿಕರ ಮುಂದೆ ದೇಶದ ಧ್ವಜ ಹಿಡಿದು ನಡೆಯುವ ಸೇನಾಪತಿಯಂತೆ ಪವಿತ್ರಾತ್ಮನು ನಿಮ್ಮ ಪ್ರಾರ್ಥನೆಯನ್ನು ನಡೆಸಿ ಮುಂದೆ ಸಾಗುವನು. ಆತನೇ ಯುದ್ಧದಲ್ಲಿ ಜಯಧ್ವಜವಾದಾತನು. ಆತನೇ ಯೆಹೋವಾ ನಿಸ್ಸಿ!

*ನೆನಪಿಗೆ : "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ, ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ, ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" ಎಂದನು (ಅ.ಕೃ. 1:8).*

ಡಿಸೆಂಬರ್ 17

# ಉದಯಕಾಲದ ಪ್ರಾರ್ಥನೆ!

ಬೆಳಿಗ್ಗೆ : ಆಮೋಸ 7,8,9
ಸಂಜೆ : ಪ್ರಕ. 8

“ದೇವರು ಇದರಲ್ಲಿದ್ದಾನೆ. ಇದಕ್ಕೆ ಚಲನವೇ ಇಲ್ಲ, ಉದಯಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು” (ಕೀರ್ತ. 46:5).

ಒಮ್ಮೆ ಒಂದು ಸಂಭವವನ್ನು ಒಂದು ಪುಸ್ತಕದಲ್ಲಿ ಓದಿದೆನು. ಒಂದು ಉದಯಕಾಲದಲ್ಲಿ ಕೆಲವು ಬೇಟೆ ನಾಯಿಗಳು ಜಿಂಕೆಗಳ ಗುಂಪನ್ನು ಅಟ್ಟಿಸಿಕೊಂಡು ಹೋಗುತ್ತಿದ್ದವು. ಆ ಗುಂಪಿನಲ್ಲಿ ಒಂದು ಪುಟ್ಟ ಜಿಂಕೆ ಮರಿ ಓಡಲಾಗದೆ ಒಂದು ಮನೆಯ ಬೇಲಿಯೊಳಗೆ ನುಗ್ಗಿ ಭಯದಿಂದ ಅಲ್ಲೇ ಆಡ್ಡಾಡುತ್ತಿದ್ದ ಆ ಮನೆಯ ಯಜಮಾನನ ಕಾಲುಗಳ ನಡುವೆ ತನ್ನ ತಲೆಯನ್ನು ಇಟ್ಟು ಅಲ್ಲೇ ಕುಳಿತುಬಿಟ್ಟಿತು. ಆ ಮನುಷ್ಯನು ಅದನ್ನು ಪ್ರೀತಿಯಿಂದ ತನ್ನ ಕೈಗಳಲ್ಲಿ ಎತ್ತಿಕೊಂಡು ಬೆನ್ನು ಸವರುತ್ತಾ ಅಟ್ಟಿಸಿಕೊಂಡು ಬಂದ ಬೇಟೆ ನಾಯಿಗಳನ್ನು ಓಡಿಸಿ ಅವುಗಳ ಬಾಯಿಗೆ ಸಿಕ್ಕದಂತೆ ಆ ಜಿಂಕೆಮರಿಯನ್ನು ಕಾಪಾಡಿದನು.

ಈ ಘಟನೆಯನ್ನು ಓದಿದಾಗ ನನ್ನನ್ನು ನಾನು ಒಂದು ಜಿಂಕೆಯ ಮರಿಯಾಗಿ ಭಾವಿಸಿದೆನು. ಬಲಹೀನನಾದ ನಾನು ಕರ್ತನ ಪಾದದಲ್ಲಿ ಆಶ್ರಯ ಪಡೆಯುವವರೆಗೆ ಅನೇಕ ಅಶುದ್ಧಾತ್ಮಗಳೂ ಅಟ್ಟಿಸಿಕೊಂಡು ಬಂದವು. ಕೆಟ್ಟ ಯೋಚನೆಗಳು, ಇಚ್ಛೆಗಳು ಅಟ್ಟಿಸಿಕೊಂಡು ಬಂದವು. ನಿರ್ಭಾಗ್ಯನಾದ ಮನುಷ್ಯನು ನಾನು, ಯಾರು ನನ್ನನ್ನು ಬಿಡುಗಡೆ ಮಾಡುವರು? ಎಂದು ಗೋಳಾಡಿದೆ. ಕರ್ತನ ಪಾದಗಳಲ್ಲಿ ನನ್ನ ಮುಖವನ್ನು ಮುಚ್ಚಿಕೊಳ್ಳುವಾಗ ನನ್ನ ಸಹಾಯಕ್ಕೆ ನಿಂತು ಶತ್ರುವಿನ ಕೈಗಳಿಂದ ಬಿಡುಗಡೆ ಮಾಡಿ ಆತನು ನನ್ನನ್ನು ಕಾಪಾಡಿದನು. ಸಂತ ಅಗಸ್ಟೀನ್ ಎಂಬ ಭಕ್ತನು ಹೀಗೆ ಹೇಳಿರುವನು “ಹಲವು ರೀತಿಯ ಶೋಧನೆಗಳಲ್ಲೂ, ಹೋರಾಟಗಳಲ್ಲೂ, ನನ್ನ ಆತ್ಮ ಸಿಕ್ಕಿಕೊಂಡು ವಿಶ್ರಾಂತಿ ಹೊಂದಲೊಲ್ಲದೆ ಇತ್ತು. ಕ್ರಿಸ್ತನ ಪಾದಗಳ ಬಳಿ ಬಂದಾಗ ನನಗೆ ವಿಶ್ರಾಂತಿ ಸಿಕ್ಕಿತು. **“My heart was restless, till it rested on Jesus”.** ಕರ್ತನ ಸಮ್ಮುಖದಲ್ಲಿ ವಿಶ್ರಾಂತಿಯನ್ನು ಹುಡುಕಿದ ದಾವೀದನು “ದೇವರೇ ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ” (ಕೀರ್ತ. 42:1) ಎಂದು ಹೇಳುತ್ತಾನೆ.

ದೇವಮಕ್ಕಳೇ, ಉದಯದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನೆಂದು ಮೇಲಿನ ವಾಕ್ಯದಲ್ಲಿ ಓದುತ್ತೇವೆ. ಹೌದು ದಿನವಿಡೀ ನೀವು ಜಯದೊಂದಿಗೆ ಪರಿಶುದ್ಧತೆಯೊಂದಿಗೆ ಜೀವಿಸಲು ಉದಯಕಾಲದಲ್ಲಿಯೇ ದೇವರನ್ನು ಹುಡುಕಿರಿ.

*ನೆನಪಿಗೆ : ನನ್ನ ಮನವೇ ಚುರುಕಾಗು. ಸ್ವರ ಮಂಡಲವೇ, ಕಿನ್ನರಿಯೇ ಎಚ್ಚರವಾಗಿರು. ಸಂಕೀರ್ತನೆಯಿಂದ ಉದಯವನ್ನು ಮುಂಗೊಳ್ಳುವೆನು (ಕೀರ್ತ. 57:8).*



ಡಿಸೆಂಬರ್ 18

# ಉದಯದಲ್ಲಿ ಕೃಪೆ!

ಬೆಳಿಗ್ಗೆ : ಓಬದ್ಯ 1
ಸಂಜೆ : ಪ್ರಕ. 9

“ಹೊತ್ತಾರೆ ನಿನ್ನ ಕೃಪೆಯು ನನಗೆ ಪ್ರಕಟವಾಗಲಿ. ನಿನ್ನಲ್ಲಿ ಭರವಸವಿಟ್ಟಿದ್ದೇನಲ್ಲಾ” (ಕೀರ್ತನೆ.143:8).

ನನ್ನನ್ನು ಕರ್ತನ ಬಳಿ ನಡೆಸಿದ ಒಬ್ಬ ಅಜ್ಜಿ ಇರುವರು. ಉದಯ ಕಾಲದಲ್ಲಿ ಆಕೆ ಯಾವಾಗಲೂ ಪ್ರಾರ್ಥಿಸುತ್ತಿದ್ದರು. ಆಕೆ ಹೀಗೆ ಹೇಳುತ್ತಿದ್ದರು. “ಉದಯಕಾಲದಲ್ಲಿ ಕರ್ತನ ಪಾದದ ಬಳಿ ಕುಳಿತು ‘ಕರ್ತನು ಏನು ಮಾತನಾಡುವನೋ’ ಎಂದು ಕಾತರದಿಂದ ಕಾದುಕೊಂಡಿರುವೆನು. ಆತನ ಸ್ವರ ನನ್ನನ್ನು ಆನಂದಗೊಳಿಸುವದು” ಎಂದು.

ಪ್ರಾರ್ಥನೆಗಳಲ್ಲೆಲ್ಲಾ ವಿಶೇಷವಾದ ಪ್ರಾರ್ಥನೆ ಉದಯಕಾಲದಲ್ಲಿ ಎದ್ದು ಮಾಡುವ ಪ್ರಾರ್ಥನೆ. ಆ ಸಮಯದಲ್ಲಿ ಮನಸ್ಸು ಸಿದ್ಧವಾಗಿರುವದು. ಈ ಪ್ರಪಂಚದ ಶಬ್ದಗಳು ಗದ್ದಲಗಳು ಕೇಳುವ ಮೊದಲು ಕರ್ತನ ಮೆಲುದನಿಗಾಗಿ ಕಾದಿದ್ದು, ಆತನ ಮಾತುಗಳನ್ನು ಕೇಳುವದು ಎಷ್ಟು ರಮ್ಯವಾದದ್ದು! ಹೊತ್ತಾರೆಯಲ್ಲಿಯೇ ನಿಮ್ಮ ಪಂಚೇಂದ್ರಿಯಗಳನ್ನು ಕರ್ತನ ಪಾದದಲ್ಲಿ ಸಮರ್ಪಿಸಿ ಕರ್ತನ ಆಳ್ವಿಕೆಗೆ ಒಪ್ಪಿಸಿಕೊಡಿರಿ. ಆತನೇ ನಿಮ್ಮನ್ನು ಪರಿಶುದ್ಧರನ್ನಾಗಿ ಕಾಪಾಡಲು ಶಕ್ತನು ಮತ್ತು ಆತನನ್ನು ಹೊತ್ತಾರೆಯಲ್ಲಿಯೇ ಸ್ತುತಿಸಿರಿ. ಆ ದಿನದ ಅಂತ್ಯದಲ್ಲಿ ಕರ್ತನು ನಿಮ್ಮನ್ನು ಪರಿಶುದ್ಧರಾಗಿ ಕಾಪಾಡಿದ್ದಕ್ಕಾಗಿ ಆತನನ್ನು ಸ್ತುತಿಸಿಕೊಂಡಾಡಿರಿ. ರಾತ್ರಿಯಲ್ಲಿ ಬಹಳ ಸಮಯ ಎದ್ದಿರದೆ ಬೇಗ ಹಾಸಿಗೆಗೆ ತೆರಳಿರಿ. ನಾನು ಹೊತ್ತಾರೆಯಲ್ಲಿ ಎದ್ದು ಕರ್ತನ ಮುಖವನ್ನು ನೋಡಬೇಕು. ಆತನ ಸ್ವರವನ್ನು ಕೇಳಬೇಕು ಎಂದು ನಿರ್ಧಾರದಿಂದ ವಿಶ್ರಾಂತಿಗೆ ತೆರಳಿರಿ. ಮಲಗಿರುವಾಗಲೂ ನಿಮ್ಮ ಆತ್ಮದೊಂದಿಗೆ ಮಾತಾಡಿ. “ಆತ್ಮವೇ, ನೀನು ಹೊತ್ತಾರೆಯಲ್ಲಿ ಎದ್ದು ಕರ್ತನನ್ನು ಸ್ತುತಿಸಬೇಕು” ಎಂದು ಹೇಳಿರಿ. ಆಗ ಪವಿತ್ರಾತ್ಮನು ನಿಮ್ಮನ್ನು ನಿರ್ದಿಷ್ಟ ವೇಳೆಯಲ್ಲಿ ತಟ್ಟಿ ಎಬ್ಬಿಸುವನು. ಕೆಲವು ಭಕ್ತರು ಹೊತ್ತಾರೆಯಲ್ಲಿ ಏಳುವ ಸಲುವಾಗಿ ರಾತ್ರಿಯಲ್ಲಿ ಊಟವನ್ನು ಕಡಿಮೆ ಮಾಡುವರು. ಆಗ ಹೊತ್ತಾರೆಯಲ್ಲಿ ಸೋಮಾರಿತನ ಅವರನ್ನು ಆವರಿಸುವದಿಲ್ಲ. ಮೂಲಪಿತೃವಾದ ಅಬ್ರಹಾಮನಿಗೆ ಉದಯಕಾಲದಲ್ಲಿ ಎದ್ದೇಳುವ ಅಭ್ಯಾಸವಿತ್ತು (ಆದಿ. 21:14, 22:3). ಇಸಾಕನಿಗೂ (ಆದಿ. 26:31), ಯಾಕೋಬನಿಗೂ (28:18). ಆ ಒಂದು ಅಭ್ಯಾಸ ಇತ್ತು. ಅನೇಕ ಭಕ್ತರು ಉದಯಕಾಲವನ್ನು ಕರ್ತನಿಗೆಂದು ಮೀಸಲಾಗಿಟ್ಟು ಕರ್ತನನ್ನು ಘನಪಡಿಸಿದರು. ನೀವೂ ಆ ಅಭ್ಯಾಸವನ್ನು ಮಾಡಿಕೊಳ್ಳಿರಿ.

ದೇವಮಕ್ಕಳೇ, ಉದಯಕಾಲದಲ್ಲಿ ಸುರಿಸಲ್ಪಡುವ ದೇವರ ಕೃಪೆಯೆಂಬ ಮನ್ನವನ್ನು ಪಡೆದುಕೊಳ್ಳಲು ಜಾಗ್ರತೆವುಳ್ಳವರಾಗಿರ್ರಿ.

*ನೆನಪಿಗೆ : “ನನ್ನನ್ನು ಪ್ರೀತಿಸುವವರನ್ನು, ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು” (ಜ್ಞಾನೋ. 8:17).*

ಡಿಸೆಂಬರ್ 19

# ಕಣ್ಣೀರಿನ ಪ್ರಾರ್ಥನೆ!

ಬೆಳಿಗ್ಗೆ : ಯೋನ. 1,2,3,4
ಸಂಜೆ : ಪ್ರಕ. 10

"ದೇವರೊಂದಿಗೆ ಹೋರಾಡಿದನು. ಹೌದು.... ಅಳುತ್ತಾ ಆತನ ಕೃಪೆಯನ್ನು ಬೇಡಿಕೊಂಡನು" (ಹೋಶೇಯ. 12:3,4).

ಪ್ರಾರ್ಥನೆಯಲ್ಲಿ ಮುಖ್ಯವಾದದ್ದು ಕಣ್ಣೀರಿನ ಪ್ರಾರ್ಥನೆ. ಒಂದು ಮಗು ತನಗೆ ಹಸಿವಾದರೂ ಸರಿ, ಕೆಳಗೆ ಬಿದ್ದರೂ ಸರಿ ಶರೀರದಲ್ಲಿ ಏನೇ ಏರುಪೇರಾದರೂ ಸರಿ, ಅಳುವುದರ ಮೂಲಕ ತನ್ನ ಅಗತ್ಯತೆಗಳನ್ನು ತಾಯಿಗೆ ತಿಳಿಸುವದು. ಮಗು ಅತ್ತಾಗ ತಾಯಿಯ ಕರುಳು ಚುರ್ರೆನ್ನುತ್ತದೆ. ತನ್ನ ಮಗುವಿನ ಅಳುವಿನ ಶಬ್ದ ಕೇಳಿದೊಡನೆ ಅವಳು ಎಲ್ಲೇ ಇದ್ದರೂ ಕೂಡಲೇ ಧಾವಿಸಿ ಬರುವಳು. ತನ್ನ ಮಗುವನ್ನು ಆರೈಕೆ ಮಾಡುವಳು.

ಕರ್ತನು ನಮಗೆ ತಾಯಿಯಂತಿರುವನು. ತಾಯಿ ಮಗುವನ್ನು ಸಂತೈಸುವ ಪ್ರಕಾರ ನಾನು ನಿಮ್ಮನ್ನು ಸಂತೈಸುವೆನು (ಯೆಶಾ. 66:13). "ತಾಯಿ ತಾನು ಹೆತ್ತ ಮಗುವಿನ ಮೇಲೆ ಕರುಣೆ ಇಡದೆ ತನ್ನ ಮೊಲೆಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ" (ಯೆಶಾ. 49:15) ಎಂಬುದು ಕರ್ತನ ವಾಗ್ದಾನವಾಗಿದೆ. ದಾವೀದನು "ಪ್ರಾರ್ಥನೆಯನ್ನು ಕೇಳುವವನೇ" ಎಂದು ಕರೆದನು (ಕೀರ್ತ. 65:2). ಆತನು ಪ್ರಾರ್ಥನೆಯನ್ನು ಕೇಳುವವನು ಮಾತ್ರವಲ್ಲ, ಪ್ರಾರ್ಥನೆಗೆ ಉತ್ತರಿಸುವವನೂ ಆಗಿರುವನು. ಕಣ್ಣೀರಿನ ಪ್ರಾರ್ಥನೆ ದೇವರ ಅಂತರ್ಯವನ್ನು ಕರಗಿಸುವದು. ಕಣ್ಣೀರಿನ ಪ್ರಾರ್ಥನೆಗೆ ನಿಶ್ಚಯವಾಗಿ ಉತ್ತರಿಸುವನು. ಯಾಕೋಬನು ತನ್ನ ಸಹೋದರನನ್ನು ಸಂಧಿಸಲು ಭಯಪಟ್ಟು ಒಂಟಿಯಾಗಿ ಪ್ರಾರ್ಥಿಸಲು 'ಯಬ್ಬೋಕ್' ಎಂಬ ಹೊಳೆಯ ದಂಡೆಗೆ ಬಂದನು. ಯಾಕೋಬನ ಮನೋವ್ಯಾಕುಲತೆಯನ್ನೂ, ಕಳವಳವನ್ನೂ ನೋಡಿ ಕರ್ತನು ತಾನೇ ಅವನಿಗೆ ಸಹಾಯ ಮಾಡಲು ಕೂಡಲೇ ಇಳಿದುಬಂದನು. ಯಾಕೋಬನನ್ನು ಬಲಪಡಿಸಿ, ಧೈರ್ಯಗೊಳಿಸಿ ಆಶೀರ್ವದಿಸಿದನು. ಅಂದು ಯಾಕೋಬನು ಮಾಡಿದ ಕಣ್ಣೀರಿನ ಪ್ರಾರ್ಥನೆ ಅವನ ಸಹೋದರನನ್ನು ಸಮಾಧಾನದಿಂದ ಸಂಧಿಸಲು ಸಹಾಯ ಮಾಡಿತು.

ದೇವಮಕ್ಕಳೇ, ನಿಮಗೆ ಇಂದು ಸಮಸ್ಯೆಗಳಿರುವದಾ? ಹೋರಾಟಗಳಿರುವದಾ? ನಿಮಗೆ ವಿರೋಧವಾಗಿ ಅನೇಕರು ಎದ್ದಿರುವರಾ? ಕಣ್ಣೀರಿನೊಂದಿಗೆ ಪ್ರಾರ್ಥಿಸಿರಿ. ನಿಮ್ಮ ಪ್ರಾರ್ಥನೆಗೆ ನಿಶ್ಚಯವಾಗಿ ಉತ್ತರವಿದೆ. ಕರ್ತನ ಹಸ್ತ ಮಧ್ಯಪ್ರವೇಶಿಸಿ ಡೊಂಕಾದವುಗಳನ್ನು ಸರಿಪಡಿಸುವದು. ಯೇಸುಕ್ರಿಸ್ತನನ್ನು ನೋಡಿರಿ. ಆತನು ಕಣ್ಣೀರು ಬಿಟ್ಟು ಪ್ರಾರ್ಥಿಸಿದ್ದನ್ನು ಯೋಹಾ. 11:35, ಲೂಕ. 19:41ರಲ್ಲಿ ಓದುತ್ತೇವೆ. ಗೆತ್ಸೇಮನೆ ತೋಟದಲ್ಲಿ ಕಣ್ಣೀರು ಸುರಿಸಿ ಪ್ರಾರ್ಥಿಸಿದನು. ಆತನು ನಿಮ್ಮ ಕಣ್ಣೀರನ್ನು ಎಂದಿಗೂ ತಿರಸ್ಕರಿಸುವದಿಲ್ಲ.

*ನೆನಪಿಗೆ : ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟ. ಯಜ್ಞದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ (ಕೀರ್ತ. 51:17).*



ಡಿಸೆಂಬರ್ 20

# ತಂದೆಯನ್ನು ನೋಡಿ!

ಬೆಳಿಗ್ಗೆ : ಮೀಕ. 1,2,3
ಸಂಜೆ : ಪ್ರಕ. 11

ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿಜನವೂ ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ಮೊಣಕಾಲೂರಿಕೊಂಡು.... (ಎಫೆ.3:15).

ಮನುಷ್ಯನ ಜೀವಿತದಲ್ಲಿ ಬಹುರಮ್ಯವಾದ ವೇಳೆ ಪ್ರಾರ್ಥನಾ ವೇಳೆಯಾಗಿದೆ. ಅದರಲ್ಲೂ ಪವಿತ್ರಾತ್ಮನೊಂದಿಗೂ ಕ್ರಿಸ್ತನೊಂದಿಗೂ ಕರ್ತನ ಕೃಪಾಸನದ ಬಳಿ ಸೇರುವದು ಅತಿ ರಮ್ಯವಾದದ್ದು. ಅಲ್ಲಿ ದೇವರೊಂದಿಗೆ ಆಳವಾದ ಸಂಬಂಧವನ್ನು ಪಡೆದುಕೊಳ್ಳುತ್ತೇವೆ. ಅಪ್ಪಾ ತಂದೆಯೇ ಎಂದು ಕರೆದು ಆತನ ಬಂಗಾರದ ಮುಖವನ್ನು ನೋಡುತ್ತೇವೆ.

"ಕೇಳಿರಿ ಕೊಡಲ್ಪಡುವದು" ಎಂದು ಸತ್ಯವೇದ ಹೇಳುತ್ತದೆ (ಮತ್ತಾ. 7:7). ನಿಮ್ಮ ಪ್ರಾರ್ಥನೆಯನ್ನು ಕೇಳುವವನೂ, ಉತ್ತರಿಸುವವನೂ ಆದ ಪರಮ ತಂದೆಯನ್ನು ನೋಡುತ್ತಾ ಪ್ರಾರ್ಥಿಸುತ್ತಲೇ ಇರಿ. ನಿಮಗೆ ಉತ್ತರ ಬರುವವರೆಗೂ ಸೋತುಹೋಗದೆ ಬೇಡುತ್ತಲೇ ಇರಿ. ಯೇಸುಕ್ರಿಸ್ತನು ಸುರಿಸಿದ ರಕ್ತದ ಪುಣ್ಯದಿಂದ ತಂದೆಯ ಕೃಪಾಸನದ ಬಳಿಗೆ ಸೇರುವ ಭಾಗ್ಯ ನಿಮಗೆ ಸಿಕ್ಕಿರುವದು. ತಡಮಾಡಿದರೂ ನಮ್ಮ ತಂದೆ ಉತ್ತರ ನೀಡುವಾತನು. ಯೇಸುಕ್ರಿಸ್ತನು ಕಲಿಸಿದ ಪ್ರಾರ್ಥನೆಯಲ್ಲಿ "ಪರಲೋಕದಲ್ಲಿರುವ ನಮ್ಮ ತಂದೆಯೇ" ಎಂದು ಕೂಗಿ ಪ್ರಾರ್ಥಿಸುವದನ್ನು ಕಲಿಸಿಕೊಟ್ಟನು (ಮತ್ತಾ. 6:9). ಹಾಗಾದರೆ ತಂದೆಯಾದ ದೇವರ ಬಳಿಯಲ್ಲಿ ಮಾತ್ರವೇ ಪ್ರಾರ್ಥಿಸಬೇಕಾ? ಯೇಸುಕ್ರಿಸ್ತನ ಬಳಿ ಪ್ರಾರ್ಥಿಸಬಾರದಾ? ಪವಿತ್ರಾತ್ಮನ ಬಳಿ ಪ್ರಾರ್ಥಿಸಬಾರದಾ? ನಿಶ್ಚಯವಾಗಿ ಯೇಸುಕ್ರಿಸ್ತನ ಬಳಿ ಪ್ರಾರ್ಥಿಸಲು ಸಾಧ್ಯ. ಯಾಕೆಂದರೆ ಆತನು ನಿತ್ಯನಾದ ತಂದೆಯ ಒಂದು ಭಾಗವಾಗಿರುವನು (ಯೆಶಾ. 9:6). ತ್ರಯೇಕತ್ವದಲ್ಲಿ ಆತನೂ ಒಬ್ಬನಾಗಿರುವನು. ತಂದೆಗೆ ಸರಿಸಮಾನನು. ಅದೇ ವೇಳೆಯಲ್ಲಿ ಪವಿತ್ರಾತ್ಮನೂ ದೇವರಾಗಿರುವದರಿಂದ ಆತನನ್ನು ನೋಡಿ ನಾವು ಪ್ರಾರ್ಥಿಸುವದು ತಪ್ಪಲ್ಲ. ಆದರೆ ಸಂತರ ನಡವಳಿಕೆಗಳನ್ನು ಅನುಸರಿಸಿ ದೇವದೂತರ ಆರಾಧನೆ ಮಾಡಿ "ನಮಗಾಗಿ ಬೇಡಿಕೊಳ್ಳಿರಿ" ಎಂದು ಅವರನ್ನು ಕೇಳುವದನ್ನು ಕರ್ತನು ತಿರಸ್ಕರಿಸುತ್ತಾನೆ. ಅಪೊ. ಪೌಲನು "ನೀವು ನುಡಿಯಿಂದಾಗಲಿ, ನಡೆಯಿಂದಾಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ" ಎಂದು ಹೇಳುತ್ತಾನೆ (ಕೊಲೊ. 3:17).

ದೇವಮಕ್ಕಳೇ, ನಿಮ್ಮ ಬಿನ್ನಹವನ್ನು, ಬೇಡಿಕೆಯನ್ನು ದೇವರಿಗೆ ತಿಳಿಯಪಡಿಸಿ. ಪ್ರೀತಿಯಿಂದ ಆತನಿಗೆ ಸ್ತೋತ್ರಸಲ್ಲಿಸಿ, ಸ್ತುತಿಸಿರಿ. ಕರ್ತನನ್ನು ಘನಪಡಿಸಿರಿ. ನಂತರ ನೀವು ಏನು ಕೇಳಿದರೂ ಕರ್ತನು ನಿಮ್ಮ ಪ್ರಾರ್ಥನೆಯನ್ನು ಕೇಳಿ ದಯಪಾಲಿಸುವನು. ಆತನು ಕನಿಕರದಲ್ಲಿ ಐಶ್ವರ್ಯವಂತನು.

*ನೆನಪಿಗೆ : ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ಆತನ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು (ಮತ್ತಾ. 6:33).*

ಡಿಸೆಂಬರ್ 21

## ಮೊಣಕಾಲಿನ ಪ್ರಾರ್ಥನೆ!

ಬೆಳಿಗ್ಗೆ : ಮೀಕ. 4,5
ಸಂಜೆ : ಪ್ರಕ. 12

"ಬನ್ನಿರಿ ನಮ್ಮ ನಿರ್ಮಾಣಿಕನಾದ ಯೆಹೋವನಿಗೆ ಸಾಷ್ಟಾಂಗವೆರಗಿ ಆರಾಧಿಸೋಣ" (ಕೀರ್ತ. 95:6).

ಕೀರ್ತನೆಗಾರನಾದ ದಾವೀದನು ಇಲ್ಲಿ ಜನರಿಗೆ ಒಂದು ಕರೆಯನ್ನು ನೀಡಿರುವನು. ಹೌದು ಜಗದುತ್ಪತ್ತಿಗೆ ಮೊದಲೇ ಆತನು ನಿಮ್ಮನ್ನು ಕ್ರಿಸ್ತನಲ್ಲಿ ಆರಿಸಿಕೊಂಡಿರುವನು (ಎಫೆ. 1:4). ತಾಯಿಯ ಗರ್ಭದಲ್ಲಿಯೇ ನಿಮ್ಮನ್ನು ಹೆಸರಿಡಿದು ಕರೆದಿರುವನು. ಈ ಭೂಮಿಯಲ್ಲಿ ಜೀವಿಸಲು ಒಂದು ಅವಕಾಶವನ್ನು ನೀಡಿರುವನು. ಆದ್ದರಿಂದಲೇ, ಆತನ ಮುಂದೆ ಸಾಷ್ಟಾಂಗವೆರಗಿ ಆರಾಧಿಸಿರಿ.

ಎರಡನೆಯದಾಗಿ ಆತನಿಗೆ ಸಾಷ್ಟಾಂಗವೆರಗಿ, ಮೊಣಕಾಲೂರುವದು. ಕರ್ತನ ಮಹತ್ವದ ಘನತೆ ಗೌರವಗಳನ್ನೂ, ನಿಮ್ಮ ದೀನತೆಯನ್ನು ತೋರಿಸುವದು. ಯೆಹೋವನು ದೊಡ್ಡವನೂ ಬಹಳವಾಗಿ ಸ್ತುತ್ಯನೂ ಆಗಿರುವನು (ಕೀರ್ತ. 96:4). ಯೆಹೋವನು ಮಹೋನ್ನತನು. ನಮ್ಮ ದೇವರು ತನ್ನ ಪರಿಶುದ್ಧ ಪರ್ವತದಲ್ಲಿ ಸರ್ವಸ್ತುತಿ ಪಾತ್ರನಾಗಿದ್ದಾನೆ (ಕೀರ್ತ. 48:1). ಕರ್ತನು ಮಹೋನ್ನತನು ಎಂಬ ದರ್ಶನ ನಿಮ್ಮಲ್ಲಿ ಇರುವದಾದರೆ ನಿಮ್ಮನ್ನು ತಗ್ಗಿಸಿ ಆತನ ಮುಂದೆ ಮೊಣಕಾಲೂರುವಿರಿ. ಆಗ ನಿಮ್ಮ ಜೀವಿತದಲ್ಲಿರುವ ದೊಡ್ಡ ಸಮಸ್ಯೆಗಳೂ ಚಿಕ್ಕದಾಗಿ ಮರೆಯಾಗಿ ಹೋಗಿಬಿಡುವದು. ಯೇಸುಕ್ರಿಸ್ತನನ್ನು ಎಂದಿಗೂ ಮರಿಯಳ ಮಡಿಲಲ್ಲಿನ ಬಾಲ ಯೇಸುವಾಗಿ ಕಾಣದಿರಿ. ಆತನು ಮಹಿಮೆಯೂ, ಮಹತ್ವವೂ ಉಳ್ಳಾತನು. ಸರ್ವಲೋಕ ಸೃಷ್ಟಿಕರ್ತನು. ಆದ್ದರಿಂದ ಆತನ ಮುಂದೆ ಭಯಭಕ್ತಿಯಿಂದ ಅಡ್ಡಬಿದ್ದು ಘನಮಾನ ಮಹಿಮೆಗಳನ್ನು ಆತನಿಗೆ ಸಲ್ಲಿಸಿರಿ. ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದಾಗ, ಅನೇಕರು ಆತನ ಮುಂದೆ ಮೊಣಕಾಲೂರಿ ಪ್ರಾರ್ಥಿಸಿದರು. ಕುಷ್ಠರೋಗಿಯೊಬ್ಬನು ಆತನ ಬಳಿಗೆ ಬಂದು ಮೊಣಕಾಲೂರಿ ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ ಎಂದು ಬೇಡಿಕೊಂಡನು (ಮಾರ್ಕ. 1:40). ಮತ್ತೊಬ್ಬನು ಆತನ ಎದುರಿಗೆ ಬಂದು ಮೊಣಕಾಲೂರಿ ಒಳ್ಳೇ ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ ಏನು ಮಾಡಬೇಕೆಂದು ಕೇಳಿದನು (ಮಾರ್ಕ. 10:17). ಆಗ ಯೇಸು ಅದರ ಮಾರ್ಗವನ್ನು ವಿವರಿಸಿದನು. ಹೀಗೆ ಅನೇಕರು ಆತನ ಮುಂದೆ ಮೊಣಕಾಲೂರಿ ಪ್ರಾರ್ಥಿಸಿದರು.

ದೇವಮಕ್ಕಳೇ, ನಿಮ್ಮ ಪ್ರಾರ್ಥನೆಯ ವೇಳೆಗಳಲ್ಲಿ ಮೊದಲನೆಯದಾಗಿ ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನನ್ನು ಸ್ತುತಿಸಿರಿ. ಸ್ತೋತ್ರಗಳನ್ನು ಸಲ್ಲಿಸಿರಿ. ನಿಮ್ಮ ದೀನತೆಯನ್ನು ನೋಡಿ ಕರ್ತನು ನಿಮ್ಮನ್ನು ಮೇಲಕ್ಕೆ ಎತ್ತಿ ಆಶೀರ್ವಾದಗಳನ್ನು ಸುರಿಸುವನು. ದೀನತೆಯುಳ್ಳವರಿಗೆ ಆತನು ಕೃಪೆ ತೋರಿಸುವನು.

*ನೆನಪಿಗೆ : "ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿ. 2:10,11)*



ಡಿಸೆಂಬರ್ 22

## ಆಂತರ್ಯದಲ್ಲಿ!

ಬೆಳಿಗ್ಗೆ : ಮೀಕ. 6,7
ಸಂಜೆ : ಪ್ರಕ. 13

"ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೂ....." (ಎಫೆ. 3:16,17).

ನೀವು ಉಪಯೋಗಿಸುವ ಒಂದು ಚಿಕ್ಕ ಮೊಬೈಲ್ ಆದರೂ ಸರಿ, ಕಾರಾದರೂ ಸರಿ, ಆಗಾಗ್ಗೆ ಚಾರ್ಜ ಮಾಡುವಾಗ ಮಾತ್ರ ಅವು ಚೆನ್ನಾಗಿ ಕೆಲಸ ಮಾಡುವವು. ಹಾಗೆಯೇ ನಿಮ್ಮೊಳಗೆ ಇರುವ ಆತ್ಮವನ್ನು ಪ್ರಾರ್ಥನೆಯ ಮೂಲಕ ಉನ್ನತ ಬಲದಿಂದ ತುಂಬಬೇಕು. ಆಗ ಮಾತ್ರವೇ ನೀವು ಯಾವ ಸತ್ಕ್ರಿಯೆಗಳನ್ನೂ ಮಾಡಲು ಶಕ್ತರಾಗಿರುವಿರಿ.

ನಿಮ್ಮ ಜೀವಿತದಲ್ಲಿ ಆತ್ಮನ ಬಲ ಕುಂದಿಹೋದರೆ ನೀವು ಪರಿಶುದ್ಧತೆಯಲ್ಲಿ ಕುಂದಿಹೋಗುತ್ತೀರಿ. ದೇವರೊಂದಿಗಿನ ಅನ್ಯೋನ್ಯತೆಯು ಕಡಿದು ಹೋಗುವದು. ಜನರಿಗೆ ಅದ್ಭುತಗಳನ್ನೂ, ಸೂಚಕ ಕಾರ್ಯಗಳನ್ನೂ ಕಾಣುವಂತೆ ಮಾಡಲಾಗದು. ಮೊಂಡಾದ ಕೊಡಲಿಯಿಂದ ಮರವನ್ನು ಕಡಿಯಲು ಹೋದರೆ ನಿಮ್ಮ ಶರೀರದ ಬಲವು ವ್ಯರ್ಥವಾಗುವದೇ ಹೊರತು ಮರ ಬೀಳುವದಿಲ್ಲ. ಆದ್ದರಿಂದ ಜಯಭರಿತವಾದ ಜೀವಿತ ನಡೆಸಲು, ದೇವಸೇವೆ ಮಾಡಲು ಆಸಕ್ತಿಯಿಂದ ಪ್ರಾರ್ಥಿಸಿರಿ. ಆಗ ನಿಮ್ಮ ಒಳಗಿರುವ ಆತ್ಮ ಬಲಹೊಂದುವದು. ಅನೇಕರು ಪವಿತ್ರಾತ್ಮನಿಗೆ ಮುಖ್ಯತ್ವವನ್ನು ಕೊಡುವದಿಲ್ಲ. ಸಾಕಷ್ಟು ಆತ್ಮದಲ್ಲಿ ಬಲಗೊಳ್ಳುವದಿಲ್ಲ. ಒಂದು ಸಭೆಯಲ್ಲಿ ಪವಿತ್ರಾತ್ಮನು ಅಧಿಕವಾಗಿ ಚಲಿಸುವ ಸಮಯ ಸ್ತುತಿ ಆರಾಧನೆಯ ಸಮಯವಾಗಿದೆ. ಆದರೆ ಅನೇಕರು ದೇವಾಲಯಕ್ಕೆ ತಡವಾಗಿ ಬರುವರು. ಸ್ತುತಿ ಆರಾಧನೆಗಳು ಮುಗಿದ ಮೇಲೆ ಪ್ರಸಂಗದ ಸಮಯಕ್ಕೆ ಬಂದು ಕುಳಿತುಕೊಳ್ಳುವರು. ಇದರಿಂದ ಅವರ ಆಂತರ್ಯ ಕರ್ತನ ಬಲದಿಂದ ತುಂಬುವದಿಲ್ಲ. ಪಾರಂಪರ್ಯವಾಗಿ ಏನೋ ತಾನೋ ಎಂದು ಕರ್ತನನ್ನು ಆರಾಧಿಸುವದರಿಂದ ಜಯಭರಿತ ಜೀವಿತವನ್ನು ಜೀವಿಸಲು ಸಾಧ್ಯವಾಗುವದಿಲ್ಲ. ಆದಿ ಸಭೆಯನ್ನು ನೋಡುವಾಗ ಅವರು ಯಾವಾಗಲೂ ಪ್ರಾರ್ಥನೆಗೆ ಮುಖ್ಯತ್ವವನ್ನು ಕೊಟ್ಟರು. ಕ್ರಿಸ್ತನು ಪರಲೋಕಕ್ಕೆ ಏರಿಹೋದ ದಿನದಿಂದ ಪಂಚಶತ್ತಮದ ದಿನದವರೆಗೂ ಹತ್ತು ದಿನಗಳು 120 ಮಂದಿ ಶಿಷ್ಯರು ಒಮ್ಮನಸ್ಸಿನಿಂದ ಪ್ರಾರ್ಥನೆಯಲ್ಲಿ ನಿರತರಾಗಿದ್ದರು (ಅ.ಕೃ. 1:14,15) ಅವರು ಪ್ರಾರ್ಥಿಸಿದಾಗ ಪವಿತ್ರಾತ್ಮನು ಅವರ ಮೇಲೆ ಇಳಿದುಬಂದನು.

ದೇವಮಕ್ಕಳೇ, ನಿಮ್ಮೊಳಗೆ ದೇವರಾತ್ಮನು ತಂಗಿರುವನು. ಕ್ರಿಸ್ತನು ತಂಗಿರುವನು. ನಿಮ್ಮೊಳಗೆ ಅವರು ಸಂತೋಷದಿಂದಿರಬೇಕು. ಸದಾ ಪವಿತ್ರಾತ್ಮಭರಿತರಾಗಿ ಆಂತರ್ಯದಲ್ಲಿ ಬಲಹೊಂದಿದವರಾಗಿರ್ರಿ.

*ನೆನಪಿಗೆ : ಎಡವಿ ಬೀಳುವವರನ್ನು ನಿನ್ನ ಮಾತುಗಳಿಂದ ಉದ್ಧರಿಸಿ ಕುಸಿಯುವ ಮೊಣಕಾಲುಗಳನ್ನು ದೃಢಪಡಿಸಿದ್ದೀ (ಯೋಬ. 4:4).*

ಡಿಸೆಂಬರ್ 23

## ವಾಡಿಕೆಯಂತೆ!

ಬೆಳಿಗ್ಗೆ : ನಹೂಮ. 1,2,3
ಸಂಜೆ : ಪ್ರಕ. 14

"ತನ್ನ ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾಮಂದಿರಕ್ಕೆ ಹೋಗಿ ಓದುವದಕ್ಕಾಗಿ ಎದ್ದು ನಿಂತನು" (ಲೂಕ. 4:16).

ಕರ್ತನಾದ ಯೇಸುಕ್ರಿಸ್ತನ ಈ ಭೂಮಿಯಲ್ಲಿನ ಜೀವಿತ ಕ್ರಮಬದ್ಧವಾದ ಜೀವಿತವಾಗಿತ್ತು. ಆತನಿಗೆ ವಾಡಿಕೆಯಂತೆ ಪ್ರಾರ್ಥನಾ ವೇಳೆ ಇತ್ತು. ಪ್ರಾರ್ಥನಾ ಸ್ಥಳವಿತ್ತು. ಆತನು ವಾಡಿಕೆಯಂತೆ ಎಣ್ಣೇ ಮರಗಳ ಗುಡ್ಡಕ್ಕೆ ಪ್ರಾರ್ಥಿಸಲು ಹೊರಟನು. ಎಂದು ಲೂಕ. 22:39ರಲ್ಲಿಯೂ ವಾಡಿಕೆಯಂತೆ ಸಬ್ಬತ್ ದಿನದಲ್ಲಿ ದೇವಾಲಯವನ್ನು ಪ್ರವೇಶಿಸಿ ಓದುವದಕ್ಕಾಗಿ ಎದ್ದು ನಿಂತನೆಂದು ಲೂಕ 4:16ರಲ್ಲಿಯೂ, ಆತನು ತನ್ನ ವಾಡಿಕೆಯಂತೆ ಅವರಿಗೆ ಬೋಧಿಸಿದನೆಂದು ಮಾರ್ಕ 10:1 ರಲ್ಲಿಯೂ ಓದುತ್ತೇವೆ. ಆತನು ವಾಡಿಕೆಯಂತೆ ಪ್ರಾರ್ಥಿಸಿದನು, ವಾಡಿಕೆಯಂತೆ ಸತ್ಯವೇದವನ್ನು ಓದಿದನು. ವಾಡಿಕೆಯಂತೆ ಬೋಧಿಸಿದನು.

ನೀವೂ ಎಷ್ಟೋ ಕಾರ್ಯಗಳನ್ನು ವಾಡಿಕೆಯಂತೆ ನಿಮ್ಮ ಜೀವಿತದಲ್ಲಿ ರೂಢಿಸಿಕೊಂಡಿರಬಹುದು. ಬೆಳಿಗ್ಗೆ ಎದ್ದು ಹಲ್ಲುಜ್ಜಿ ಸ್ನಾನ ಮಾಡುವದು, ಕಛೇರಿಗೆ ಸಮಯಕ್ಕೆ ಸರಿಯಾಗಿ ಹೋಗುವದು, ಸಮಯಕ್ಕೆ ಸರಿಯಾಗಿ ಅಡಿಗೆ ಮಾಡುವದು ಹೀಗೆ ಅನೇಕ ಕಾರ್ಯಗಳನ್ನು ಮಾಡುವದನ್ನು ಅಭ್ಯಾಸ ಮಾಡಿಕೊಂಡಿರುವಿರಿ. ಅದರಂತೆಯೇ ಕರ್ತನ ಪಾದಗಳ ಬಳಿ ಹೋಗಲು ನಿರ್ದಿಷ್ಟ ವೇಳೆಯನ್ನು ಅಭ್ಯಾಸ ಮಾಡಿಕೊಳ್ಳಿರಿ. ನಿಮ್ಮ ಪ್ರಾರ್ಥನಾ ಜೀವಿತ ಕ್ರಮಬದ್ಧವಾಗಿರಲಿ. ಕರ್ತನು ಮನುಷ್ಯನನ್ನು ಸೃಷ್ಟಿಸುವ ಮೊದಲು ಭೂಮಿಯನ್ನು ನೋಡಿ ಅದು ಕ್ರಮವಿಲ್ಲದೆಯೂ, ಬರಿದಾಗಿಯೂ ಇರುಳಿನಿಂದ ಕೂಡಿದ್ದಾಗಿಯೂ ಇರುವದನ್ನು ನೋಡಿ ಆತನು ಎಲ್ಲವನ್ನೂ ಕ್ರಮಪಡಿಸಿ ಮನುಷ್ಯನು ಜೀವಿಸಲು ಬೇಕಾದ ಎಲ್ಲವನ್ನೂ ಸೃಷ್ಟಿಸಿದನು. ಹಾಗೆಯೇ ನಿಮ್ಮ ಆತ್ಮೀಕ ಜೀವಿತವೂ ಕ್ರಮವಿಲ್ಲದೆಯೂ, ಬರಿದಾಗಿಯೂ ಇರುಳಿನಿಂದ ಕೂಡಿದ್ದಾಗಿಯೂ ಇರಲೇಬಾರದು. ಅದು ಕ್ರಮಬದ್ಧವಾಗಿರಬೇಕು.

ದೇವಮಕ್ಕಳೇ, ಕರ್ತನು ಎಲ್ಲದರಲ್ಲಿಯೂ ಕ್ರಮವನ್ನು ಬಯಸುತ್ತಾನೆ. ನಿಮ್ಮ ಆತ್ಮೀಕ ಜೀವಿತಕ್ಕೂ ಒಂದು ಕ್ರಮವನ್ನು ಇಟ್ಟಿರುವನು. ಅದರಲ್ಲಿ ಯಾವದೇ ನ್ಯೂನತೆಗಳು ಇರಬಾರದು. ನೀವು ಪ್ರಾರ್ಥನೆಯನ್ನು ಆರಂಭಿಸುವ ಮೊದಲು ಕರ್ತನನ್ನು ಹಾಡಿ ಸ್ತುತಿಸಿರಿ. ಸತ್ಯದಿಂದಲೂ, ಆತ್ಮದಿಂದಲೂ ಆರಾಧಿಸಿ ಅದು ಅಪರಿಮಿತವಾದ ದೇವಪ್ರಸನ್ನತೆಯನ್ನು ನಿಮ್ಮೊಳಗೆ ತರುವದು. ಆನಂತರ ಪ್ರಾರ್ಥಿಸುವಾಗ ನಿಮ್ಮ ಪ್ರಾರ್ಥನಾ ಜೀವಿತ ಮಹಿಮೆಯುಳ್ಳದ್ದಾಗಿರುವದು.

*ನೆನಪಿಗೆ : "ಆ ಏಳು ದೀಪಗಳು ದೀಪಸ್ತಂಭದ ಎದುರಾಗಿರುವ ಸ್ಥಳಕ್ಕೆ ಬೆಳಕು ಕೊಡುವಂತೆ ಅವುಗಳನ್ನು ಇಡಬೇಕೆಂದು ಹೇಳಿದನು" (ಅರಣ್ಯ. 8:2).*



ಡಿಸೆಂಬರ್ 24

## ನಂಬಿಕೆಯ ಪ್ರಾರ್ಥನೆ!

ಬೆಳಿಗ್ಗೆ : ಹಬಕ್ಕೂಕ 1,2,3
ಸಂಜೆ : ಪ್ರಕ. 15

"ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ" (ಮಾರ್ಕ. 11:24).

ಕರ್ತನಾದ ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದಾಗ, ಅನೇಕ ಅದ್ಭುತಗಳನ್ನು ಮಾಡಿದನು. ಅದಕ್ಕೆ ಮುಖ್ಯವಾದ ಕಾರಣ ಆತನಲ್ಲಿದ್ದ ಮಹಿಮೆಯೇ ಆಗಿದ್ದರೂ ಸಹಾ ಆತನು ಜನರಲ್ಲಿದ್ದ ನಂಬಿಕೆಯನ್ನು ಎತ್ತಿಹಿಡಿದು ಮಾತನಾಡಿದನು. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ (ಮತ್ತಾ. 21:22) ಎಂದು ಹೇಳುತ್ತಾನೆ. ಅದಕ್ಕೆ ಉದಾಹರಣೆಯಾಗಿ ಒಂದು ಬೆಟ್ಟವನ್ನೂ, ಅತ್ತೀಮರವನ್ನೂ ಉಪಮಾನವಾಗಿ ಹೇಳಿದನು. ನಂಬಿಕೆಯಿಂದ ಬೆಟ್ಟವನ್ನು ನೋಡಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಹಾಗೆಯೇ ಆಗುವದು (ಮಾರ್ಕ. 11:23). "ಸಾಸಿವೇ ಕಾಳಿನಷ್ಟು ನಂಬಿಕೆ ನಿಮಗಿದ್ದರೆ, ಅತ್ತೀಮರಕ್ಕೆ ನೀನು ಬೇರು ಸಹಿತ ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ನಾಟಿಕೋ ಎಂದು ಹೇಳಿದರೂ ಅದು ನಿಮ್ಮ ಮಾತನ್ನು ಕೇಳುವದು" (ಲೂಕ. 17:6) ಎಂದು ಹೇಳುತ್ತಾನೆ.

ನಂಬಿಕೆಯಿಂದ ಕೂಡಿದ ನಿಮ್ಮ ಪ್ರಾರ್ಥನೆ ನಿಮಗೆ ಎಲ್ಲವನ್ನೂ ದೊರಕಿಸಿಕೊಡುವದು. ತಡೆಗಳನ್ನೆಲ್ಲಾ ಒಡೆದುಬಿಡುವದು. ಬೆಟ್ಟದಂತೆ ಕಾಣುವ ಸಮಸ್ಯೆಗಳೆಲ್ಲಾ ಹಬೆಯಂತೆ ಕಾಣದೇ ಹೋಗುವಂತೆ ಮಾಡುವದು. ಮನುಷ್ಯರಿಂದ ಆಗದ ಕಾರ್ಯ ದೇವರಿಂದ ಸಾಧ್ಯವಾಗುವದು. ನಂಬುವವನಿಗೆ ಎಲ್ಲಾ ಆಗುವದು (ಮಾರ್ಕ. 9:23). ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ (1 ಯೋಹಾ. 5:4). ನಿಮ್ಮ ಪ್ರಾರ್ಥನೆಯನ್ನು ಕೇಳಿ ದೇವರು ಉತ್ತರ ನೀಡುವನು ಎಂಬ ನಂಬಿಕೆ ನಿಮಗೆ ಇರಬೇಕಾದದ್ದು ಅಗತ್ಯ. ಯೇಸು ಕ್ರಿಸ್ತನು ಶತಾಧಿಪತಿಯನ್ನು ನೋಡಿ ನೀನು ನಂಬಿದಂತೆ ನಿನಗಾಗಲಿ ಹೋಗು ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು ಎಂದು ಸತ್ಯವೇದ ಹೇಳುತ್ತದೆ (ಮತ್ತಾ. 8:13).

ದೇವಮಕ್ಕಳೇ, ನೀವು ನಂಬಿಕೆಯಿಂದ ತುಂಬಿದವರಾಗಿರ್ರಿ. ವಾಗ್ದಾನ ವಾಕ್ಯಗಳನ್ನು ನಂಬಿಕೆಯಿಂದ ಅರಿಕೆ ಮಾಡಿರಿ. ಕನಿಕರ ತುಂಬಿದ ಕರ್ತನು ನಿಮ್ಮ ನಂಬಿಕೆಯನ್ನು ಘನಪಡಿಸುವನು. ನಿಶ್ಚಯವಾಗಿ ನಿಮಗೆ ಅದ್ಭುತಗಳನ್ನು ಮಾಡುವನು. ನಂಬಿಕೆಯಲ್ಲಿ ಬೆಳೆಯಿರಿ. ನಂಬಿಕೆಯಲ್ಲಿ ಬಲಗೊಳ್ಳಿರಿ. ಜಯದ ಜೀವಿತ ನಿಮ್ಮದಾಗಲಿ.

*ನೆನಪಿಗೆ : ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡೆದುಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ (ಯೋಹಾನ. 20:31).*

ಡಿಸೆಂಬರ್ 25

# ಇಮ್ಮಾನುವೇಲ!

ಬೆಳಿಗ್ಗೆ : ಚೆಫನ್ಯ 1,2,3
ಸಂಜೆ : ಪ್ರಕ. 16

"ಇಮ್ಮಾನುವೇಲ ಅಂದರೆ ದೇವರು ನಮ್ಮೊಂದಿಗಿದ್ದಾನೆ ಎಂದು ಅರ್ಥ" (ಮತ್ತಾ. 1:23).

'ಅನುದಿನದ ಆಹಾರ' ಕುಟುಂಬದವರಾದ ನಿಮಗೆ ಯೇಸುಕ್ರಿಸ್ತನ ಹೆಸರಿನಲ್ಲಿ 'ಕ್ರಿಸ್‌ಮಸ್' ಹಬ್ಬದ ಶುಭಾಷಯಗಳು. ಬೆತ್ಲೆಹೇಮಿನಲ್ಲಿ ಜನಿಸಿ ಇಮ್ಮಾನುವೇಲನು ನಿಮ್ಮೊಂದಿಗಿದ್ದು, ಈ ದಿನದ ಎಲ್ಲಾ ಆಶೀರ್ವಾದಗಳನ್ನೂ ನಿಮಗೆ ಅನುಗ್ರಹಿಸಲಿ.

ಭೂವ್ಯಾಕಾಶಗಳನ್ನು ಉಂಟುಮಾಡಿದ ದೇವರು ಇಮ್ಮಾನುವೇಲನಾಗಿ ನಮ್ಮೊಂದಿಗಿರುವದು ಮಹಾ ಭಾಗ್ಯಕರವಾದದ್ದು! ನಾನು ನಿನ್ನನ್ನು ಬಿಟ್ಟು ಅಗಲುವದಿಲ್ಲ. ನಿನ್ನ ಕೈ ಬಿಡುವದಿಲ್ಲ ಎಂದು ಹೇಳಿದಾತನು ನಮ್ಮೊಂದಿಗೆ ಎಂದೆಂದಿಗೂ ವಾಸಿಸುವದಕ್ಕಾಗಿ ಇಮ್ಮಾನುವೇಲನಾದನು. ಆತನು ನಮ್ಮೊಂದಿಗೆ ಇರುವದು ಮಾತ್ರವಲ್ಲ, ನಮ್ಮೊಳಗೆ ಇರುವನು. ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ (ಮತ್ತಾ.28:20) ಎಂದು ವಾಗ್ದಾನ ಮಾಡಿರುವನು. ಆತನು ಪರಲೋಕವನ್ನು ತ್ಯಜಿಸಿ, ಈ ಲೋಕದ ಜನರಾದ ನಮ್ಮೊಂದಿಗಿರಲು ಬಂದದ್ದು ಅತಿಶಯವಾದದ್ದು! ಒಮ್ಮೆ ಒಬ್ಬ ಬಾಲಕನು ಯುದ್ಧದಲ್ಲಿ ಅಣುಗುಂಡುಗಳಿಗೆ ಸಿಕ್ಕಿ ಮರಣ ಹೊಂದಿದ ತನ್ನ ತಂದೆಯ ಚಿತ್ರ ಪಟದ ಮುಂದೆ ನಿಂತು ಕಣ್ಣೀರು ಸುರಿಸುತ್ತಾ "ಅಪ್ಪಾ ಚಿತ್ರಪಟದ ಒಳಗಿಂದ ಇಳಿದು ಬಂದು ನನ್ನನ್ನು ಸಂತೈಸು, ಸಂತೋಷಪಡಿಸು" ಎಂದು ಗೋಳಾಡುತ್ತಿದ್ದನು. ಈ ದೃಶ್ಯ ಅಲ್ಲಿದ್ದವರ ಹೃದಯಗಳನ್ನು ಕರಗಿಸಿಬಿಟ್ಟಿತು. ಇದ್ದಕ್ಕಿದ್ದಂತೆ ಬಾಗಿಲು ತಟ್ಟುವ ಶಬ್ದ ಕೇಳಿಸಿತು. ಆ ಬಾಲಕನು ಓಡಿಹೋಗಿ ಬಾಗಿಲು ತೆರೆದನು. ಎದುರಿಗೆ ನಿಂತ ವ್ಯಕ್ತಿಯನ್ನು ನೋಡಿ ತನ್ನ ಕಣ್ಣನ್ನೇ ನಂಬದಾದನು. ಅವನ ತಂದೆ ನಗುತ್ತಾ ಅವನ ಮುಂದೆ ನಿಂತಿದ್ದನು. ಯುದ್ಧರಂಗದಲ್ಲಿ ಸತ್ತ ಸೈನಿಕರ ಗುರುತನ್ನು ತಪ್ಪಾಗಿ ಹಿಡಿದಿದ್ದರಿಂದ ಈ ಹುಡುಗನ ಮನೆಯವರಿಗೆ ತಪ್ಪಾದ ಸಮಾಚಾರ ಬಂದಿತ್ತು. ಈ ವಿಚಾರವನ್ನು ಆ ತಂದೆ ವಿವರಿಸಿದಾಗ ಆ ಹುಡುಗನು ಆನಂದದಿಂದ ಕುಣಿದು ಕುಪ್ಪಳಿಸಿದನು. ತನ್ನ ತಂದೆ ಇನ್ನೆಂದಿಗೂ ತನ್ನನ್ನು ಬಿಟ್ಟು ಅಗಲಲಾರನೆಂದು ಅವನು ಸಂತೋಷದಿಂದ ಹೇಳಿದನು. ಆದರೆ ಮರಣವನ್ನೇ ಗೆದ್ದು ಇಮ್ಮಾನುವೇಲನಾಗಿ ನಮ್ಮೊಂದಿಗೆ ಸದಾ ಜೀವಿಸಲು ಬಂದಿರುವ ನಮ್ಮ ಕರ್ತನ ಕುರಿತು ಇನ್ನೆಷ್ಟರಮಟ್ಟಿಗೆ ಸಂತೋಷಿಸಿ ನಮ್ಮಲ್ಲಿ ಇರಬೇಕಲ್ಲವೇ?

ದೇವಮಕ್ಕಳೇ, ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವನು (ಕೊಲೊ. 1:27). ಪವಿತ್ರಾತ್ಮನ ಮೂಲಕ ಕ್ರಿಸ್ತನ ಇರುವಿಕೆಯನ್ನು ಸದಾ ಅನುಭವಿಸುವಿರಿ. "ಬೆಟ್ಟಗಳು ಸ್ಥಳವನ್ನು ಬಿಟ್ಟುಹೋದಾವು, ಗುಡ್ಡಗಳು ಕದಲಿಯಾವು, ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟುಹೋಗದು. ನನ್ನ ಸಮಾಧಾನದ ಒಪ್ಪಂದವು ಕದಲದು" (ಯೆಶಾ. 54:10) ಎಂದು ಕರ್ತನು ಹೇಳಿರುವನು.

*ನೆನಪಿಗೆ : ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ. ವರದ ಮಗನು ನಮಗೆ ದೊರೆತನು. ಆಡಳಿತವು ಅವನ ಬಾಹುವಿನ ಮೇಲಿರುವದು. ಅದ್ಭುತ ಸ್ವರೂಪನು, ಆಲೋಚನಾ ಕರ್ತನು ಪರಾಕ್ರಮಿಯಾದ ದೇವರು ನಿತ್ಯನಾದ ತಂದೆ ಸಮಾಧಾನದ ಪ್ರಭು ಎಂಬುದು ಆತನ ಹೆಸರು (ಯೆಶಾ. 9:6).*



ಡಿಸೆಂಬರ್ 26

# ಕರ್ತನು ನೀಡುವ ಪ್ರಾರ್ಥನಾ ಮನವಿ!

ಬೆಳಿಗ್ಗೆ : ಹಗ್ಗಾಯ 1,2
ಸಂಜೆ : ಪ್ರಕ. 17

"ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ" (ಯಾಕೋಬ.5:16).

ನಾವು ಹಲವು ವೇಳೆಗಳಲ್ಲಿ ಹೆಸರಾಂತ ದೇವ ಸೇವಕರ ಬಳಿ ನಮ್ಮ ವಿಜ್ಞಾಪನೆಗಳನ್ನು ಕೊಟ್ಟು ನೀತಿವಂತನು ಮಾಡುವ ಆಸಕ್ತಿಯುಳ್ಳ ವಿಜ್ಞಾಪನೆಯು ಬಹಳ ಬಲವುಳ್ಳದ್ದಾಗಿರುವದು. ಆದ್ದರಿಂದ ನಮಗಾಗಿ ಪ್ರಾರ್ಥಿಸಿರಿ ಎಂದು ಕೇಳಿಕೊಳ್ಳುತ್ತೇವೆ. ಹಾಗೆಯೇ ದೇವಸೇವಕರೂ ತಮ್ಮ ಸೇವೆಗಾಗಿ ಪ್ರಾರ್ಥಿಸುವಂತೆ ವಿಶ್ವಾಸಿಗಳ ಬಳಿ ಹೇಳುವರು.

ಕರ್ತನೂ ಕೆಲವು ವೇಳೆಗಳಲ್ಲಿ ಪ್ರಾರ್ಥನಾ ಮನವಿಗಳನ್ನು ಕೊಡುವನು. ನೀವು ಆತನೊಂದಿಗೆ ಕೂಡಿ ಪ್ರಾರ್ಥಿಸಬೇಕೆಂದು ನಿರೀಕ್ಷಿಸುವನು. ನಿಮ್ಮೊಳಗೆ ನೆಲೆಗೊಂಡಿರುವ ಕ್ರಿಸ್ತನೂ ಪ್ರಾರ್ಥನಾವೀರನು. ಪವಿತ್ರಾತ್ಮನೂ ಪ್ರಾರ್ಥನಾವೀರನು. ಆದ್ದರಿಂದ ನಂಬಿಕೆಯಿಂದ ನಿಮ್ಮ ಕೈಗಳನ್ನು ಕ್ರಿಸ್ತನ ಕೈಗಳೊಂದಿಗೂ, ಪವಿತ್ರಾತ್ಮನ ಕೈಗಳೊಂದಿಗೂ ಜೋಡಿಸಿ ಆತನು ಕೊಡುವ ಪ್ರಾರ್ಥನಾ ಸೂಚನೆಗಳಿಗಾಗಿ ಪ್ರಾರ್ಥಿಸುವಿರಾ? ಮೊದಲನೇ ಪ್ರಾರ್ಥನಾ ಸೂಚನೆ, "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಯ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ, ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ" (ಮತ್ತಾ. 5:44,45). ಅನೇಕ ದೇವಮಕ್ಕಳು, ನೂರಾರು ದೇವಸೇವಕರುಗಳ ಹೆಸರನ್ನು ಬರೆದಿಟ್ಟುಕೊಂಡು ಅವರಿಗಾಗಿ ಪ್ರಾರ್ಥಿಸುತ್ತಾ ಬರುತ್ತಿರುವರು. ಆದರೆ ದುರ್ಮಾರ್ಗಿಗಳಿಗಾಗಿ ಕೊಲೆಗಡುಕರಿಗಾಗಿ, ಅಕ್ರಮಗಾರರಿಗಾಗಿ, ಪ್ರಾರ್ಥಿಸವವರು ವಿರಳ. ಯೇಸುಕ್ರಿಸ್ತನು ಶಿಲುಬೆಯಲ್ಲಿ ಜಜ್ಜಲ್ಪಡುವಾಗ ಆತನ ಇಕ್ಕೆಲಗಳಲ್ಲೂ ದುಷ್ಟಕಳ್ಳರು ಶಿಲುಬೆಗೇರಿಸಲ್ಪಟ್ಟರು. ಆದರೆ ಅವರಲ್ಲಿ ಒಬ್ಬ ಕಳ್ಳನು ಕ್ರಿಸ್ತನು ತನ್ನನ್ನು ಹಿಂಸೆಗೊಳಪಡಿಸಿದವರಿಗಾಗಿ ಪ್ರಾರ್ಥಿಸಿದ್ದನ್ನು ಕೇಳಿ ಮಾನಸಾಂತರ ಪಟ್ಟು "ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ" ಅಂದನು (ಲೂಕ.23:42). ಕ್ರಿಸ್ತನ ಪ್ರಾರ್ಥನೆ ಆ ಕಳ್ಳನನ್ನು ಎಷ್ಟು ತ್ವರಿತವಾಗಿ ರಕ್ಷಿಸಿತು ಎಂಬುದನ್ನು ಯೋಚಿಸಿನೋಡಿರಿ.

ದೇವಮಕ್ಕಳೇ, ನೀತಿವಂತರು ಬಿದ್ದುಹೋಗುವದು, ದುರ್ಮಾರ್ಗಿಗಳು ಪಾಪದಲ್ಲಿ ಸಾಯುವದು ಕರ್ತನಿಗೆ ಇಷ್ಟವಿಲ್ಲ. ಅವರು ರಕ್ಷಿಸಲ್ಪಡಬೇಕೆಂಬುದೇ ಆತನ ಚಿತ್ತ. ಆದ್ದರಿಂದ ದುಷ್ಟಜನರು ರಕ್ಷಿಸಲ್ಪಡುವಂತೆ ಅವರಿಗಾಗಿ ಪ್ರಾರ್ಥಿಸಿರಿ. ಅವರನ್ನು ರಕ್ಷಿಸಲು ಕರ್ತನು ಶಕ್ತನಾಗಿರುವನು.

*ನೆನಪಿಗೆ : ಮನುಷ್ಯಕುಮಾರನು ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕಾಗಿ ಬಂದನು (ಲೂಕ. 19:10).*

ಡಿಸೆಂಬರ್ 27

## ಕೆಲಸದವರಿಗಾಗಿ ಪ್ರಾರ್ಥಿಸಿರಿ!

ಬೆಳಿಗ್ಗೆ : ಜೆಕರ್ಯ 1,2,3,4
ಸಂಜೆ : ಪ್ರಕ. 18

"ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" (ಮತ್ತಾ. 9:38).

ಕರ್ತನು ನೀಡುವ ಎರಡನೇ ಪ್ರಾರ್ಥನಾ ಮನವಿ ಕೊಯ್ಲಿಗಾಗಿ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳುವದಾಗಿದೆ. ಬಿತ್ತಲು ಒಂದು ಕಾಲವಿತ್ತು. ಆದರೆ ಈಗಲಾದರೋ ಸುಗ್ಗಿಯ ಕಾಲವಾಗಿದೆ. ಒಳ್ಳೆಯ ಬೀಜವನ್ನು ಬಿತ್ತುವವನೆಂದರೆ ಮನುಷ್ಯಕುಮಾರನು ಹೊಲವೆಂದರೆ ಈ ಲೋಕ; ಒಳ್ಳೆಯ ಬೀಜವೆಂದರೆ ಪರಲೋಕ ರಾಜ್ಯದವರು; ಹಣಜಿ ಸೈತಾನನವರು; ಬಿತ್ತುವ ವೈರಿ ಸೈತಾನನು; ಸುಗ್ಗೀಕಾಲವೆಂದರೆ ಯುಗದ ಸಮಾಪ್ತಿ; ಕೊಯ್ಯುವವರು ದೇವದೂತರು. ಹೇಗೆ ಹಣಜಿಯನ್ನು ಆರಿಸಿ ತೆಗೆದು ಸುಟ್ಟುಬಿಡುತ್ತಾರೋ, ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವದು" (ಮತ್ತಾ.13:37–40) ಎಂದು ಸತ್ಯವೇದ ಹೇಳುತ್ತದೆ.

ಇಂದು ಎಲ್ಲಿ ನೋಡಿದರೂ ಜನರು ರಕ್ಷಣೆ ಹೊಂದುತ್ತಿರುವರು. ದೀಕ್ಷಾಸ್ನಾನ ಹೊಂದಿ, ಅಭಿಷೇಕ ಪಡೆದು ದೇವರ ಸೇವಕರಾಗಿ ಮಾರ್ಪಡುತ್ತಿರುವರು. ಆದರೂ ಇವರು ಸಾಲದಾಗಿರುವರು. ಭಾರತ ದೇಶದಲ್ಲಿ ಕರ್ತನನ್ನು ಸಂಧಿಸಲ್ಪಡದ ಅನೇಕಾನೇಕ ಜನರಿರುವರು. ಇನ್ನೂ ಎಷ್ಟೋ ಕೋಟಿ ಜನರು ಕರ್ತನಿಂದ ಸಂಧಿಸಲ್ಪಡದೇ ಇರುವರು. ಲಕ್ಷಾಂತರ ಜನರು ಕರ್ತನ ನಾಮವನ್ನು ಕೇಳಿಯೇ ಇಲ್ಲ. ಇಂಥಹ ಸ್ಥಳಗಳಲ್ಲಿರುವ ಜನರ ಬಳಿಗೆ ಸುವಾರ್ತೆಯನ್ನು ಕೊಂಡೊಯ್ಯಬೇಕಾಗಿದೆ. ಗೋದಿಯ ಕಾಳುಗಳಾಗಿ ಸತ್ತು, ಸಾವಿರಾರು ಜನರನ್ನು ಕರ್ತನ ಬಳಿಗೆ ತರುವ ಸೇವಕರು ಬೇಕಾಗಿದ್ದಾರೆ. ದೇವರೇ ಕೊಯ್ಲಿಗೆ ಕೆಲಸದವರನ್ನು ಕಳುಹಿಸು. ಮಿಷನರಿಗಳನ್ನು ಕಳುಹಿಸು. ಪ್ರಾರ್ಥನಾವೀರರನ್ನು ಎಬ್ಬಿಸು. ರಕ್ತಸಾಕ್ಷಿಗಳನ್ನು ಎಬ್ಬಿಸು. ಸಭೆಗಳನ್ನು ಉಜ್ಜೀವನಗೊಳಿಸು ಎಂದು ಕಣ್ಣೀರಿಟ್ಟು ಪ್ರಾರ್ಥಿಸಿರಿ. ವಿಲಿಯಂ ಕೇರಿಯವರು ಇಂಗ್ಲೆಂಡ್ ದೇಶದಲ್ಲಿ ಚಪ್ಪಲಿ ಹೊಲಿಯುವವರಾಗಿದ್ದರು. ಅವರಿಗೆ ಭಾರತ ದೇಶದ ಕುರಿತು ಒಂದು ರೀತಿಯ ಭಾರವಿತ್ತು. ತನ್ನ ಕೆಲಸ ಕೋಣೆಯಲ್ಲಿ ಗೋಡೆಯ ಮೇಲೆ ಭಾರತ ದೇಶದ ಭೂಪಟವನ್ನು ಹಾಕಿ ದಿನವೂ ಪ್ರಾರ್ಥಿಸುತ್ತಿದ್ದರಂತೆ. ಒಂದು ದಿನ ತನ್ನ ಅಂಗಡಿಯನ್ನು ಮುಚ್ಚಿ ಭಾರತಕ್ಕೆ ಮಿಷನರಿಯಾಗಿ ಬಂದು ಇಲ್ಲಿನ ಭಾಷೆಗಳನ್ನು ಕಲಿತು ಸತ್ಯವೇದವನ್ನು ತರ್ಜುಮೆ ಮಾಡಿದರು. ಭಾರತದ ತಳಹದಿಯನ್ನೇ ಅಲ್ಲಾಡಿಸಿಬಿಟ್ಟರು.

ದೇವಮಕ್ಕಳೇ, ಭಾರತೀಯರಾದ ನಮ್ಮ ಮೇಲೆ ಬಿದ್ದ ಭಾರ ಇಲ್ಲಿನ ಜನರನ್ನು ನರಕಕ್ಕೆ ತಪ್ಪಿಸಿ ಕ್ರಿಸ್ತನ ಬಳಿ ಅಂದರೆ ಪರಲೋಕ ರಾಜ್ಯಕ್ಕೆ ಸೇರಿಸುವುದೇ ಆಗಿದೆ. ಇದಕ್ಕಾಗಿ ಶ್ರಮಿಸುವಿರಾ?

*ನೆನಪಿಗೆ : ಸಕಲ ವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ (ಎಫೆ. 6:18).*



ಡಿಸೆಂಬರ್ 28

## ದೇಶಕ್ಕಾಗಿ ಪ್ರಾರ್ಥಿಸಿರಿ!

ಬೆಳಿಗ್ಗೆ : ಜೆಕರ್ಯ 5,6,7,8
ಸಂಜೆ : ಪ್ರಕ. 19

"ನಾನು ದೇಶವನ್ನು ಹಾಳು ಮಾಡದಂತೆ ನನ್ನೆದುರಿಗೆ ದೇಶರಕ್ಷಣೆಗಾಗಿ ಪೌಳಿಯ ಒಡಕಿನಲ್ಲಿ ಗೋಡೆಯನ್ನು ಗಟ್ಟಿ ಮಾಡುವದಕ್ಕೂ ತಕ್ಕವನನ್ನು ಹುಡುಕಲು ಯಾರೂ ಸಿಕ್ಕಲಿಲ್ಲ" (ಯೆಹೆಜ್ಕೇಲ.22:30).

ಕರ್ತನು ನೀಡುವ ಮೂರನೆಯ ಪ್ರಾರ್ಥನಾ ಮನವಿ "ದೇಶಕ್ಕಾಗಿ ಪೌಳಿಯ ಒಡಕಿನಲ್ಲಿ ನಿಂತು ಪ್ರಾರ್ಥಿಸಿರಿ" ಎಂಬುದು. ಒಂದು ದೇಶದಲ್ಲಿ ಪಾಪ ಹೆಚ್ಚುವಾಗ ಆ ದೇಶವು ಅಳಿವಿಗೂ, ದೇವರ ಕೋಪಾಗ್ನಿಗೂ ತುತ್ತಾಗುವದು. ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ" (ಜ್ಞಾನೋ. 14:34).

ಇಂದು ನಮ್ಮ ದೇಶದಲ್ಲಿ ಅಕ್ರಮ, ಅತ್ಯಾಚಾರ, ಭ್ರಷ್ಟಾಚಾರಗಳು ಎಲ್ಲೆಲ್ಲೂ ತಲೆ ಎತ್ತಿ ನಿಂತಿರುವವು. ದೇಶದ ರಾಜಕೀಯ ಸ್ಥಿತಿಗತಿಗಳನ್ನು ನೋಡುವಾಗ ಎಲ್ಲೆಲ್ಲಿಯೂ ಸ್ವಾರ್ಥ ತುಂಬಿರುವದು ಕಂಡುಬರುತ್ತಿದೆ. ಇದು ಧರ್ಮಸಂಸ್ಥೆಗಳನ್ನೂ ಹೊಕ್ಕು ದೇಶದ ವ್ಯವಸ್ಥೆಯನ್ನೇ ಹದಗೆಡಿಸುತ್ತಿದೆ. ಧರ್ಮದ ಹೆಸರಿನಲ್ಲಿ ಅನ್ಯಾಯ ಅಕ್ರಮಗಳಿಂದ ಜನರ ನೆಮ್ಮದಿಯು ಹಾಳಾಗುತ್ತಿದೆ. ಅಷ್ಟು ಮಾತ್ರವಲ್ಲ, ಸಲಿಂಗ ವಿವಾಹಗಳು ಸಮಾಜದಲ್ಲಿ ಸ್ಥಾನ ಪಡೆದುಕೊಳ್ಳುತ್ತಿದೆ. ಇದು ಸೈತಾನನು ತಂದುಹಾಕುವ ವಿಪರೀತವಾದ ಇಚ್ಛೆಯಾಗಿದೆ. ಹಿಂದೆ ಕರ್ತನು ಈ ಒಂದು ಪಾಪಕ್ಕಾಗಿ ಸೊದೋಮ ಗೊಮೋರ ಪಟ್ಟಣಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ ಅದರಲ್ಲಿದ್ದವರೆಲ್ಲರನ್ನೂ ನಾಶಮಾಡಿದನು (ಆದಿ. 19:24). ಅಳಿವಿಗೆ ನೇರವಾಗಿ ಸಾಗುತ್ತಿರುವ ದೇಶಗಳನ್ನು ಕರ್ತನ ಕಡೆಗೆ ತಿರುಗಿಸಲು ಮೊಣಕಾಲಿನಲ್ಲಿ ನಿಂತು ಪ್ರಾರ್ಥಿಸುವ ಪ್ರಾರ್ಥನಾ ವೀರರನ್ನು ಕರ್ತನು ಹುಡುಕುತ್ತಿರುವನು. ಸೊದೋಮಿಗಾಗಿ ಗೋಳಾಡಿ ಪ್ರಾರ್ಥಿಸಿದ ಅಬ್ರಹಾಮನ ಪ್ರಾರ್ಥನೆಯನ್ನು ಸ್ವಲ್ಪ ಧ್ಯಾನಿಸಿ ನೋಡಿರಿ. ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವಿಯಾ? ದುರ್ಮಾರ್ಗಿಗಳೊಂದಿಗೆ ನೀತಿವಂತರನ್ನೂ ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದೆಂದು ಪ್ರಾರ್ಥಿಸಿದನು (ಆದಿ. 18:23–25). ಇಸ್ರಾಯೇಲ್ಯರು ಅರಣ್ಯದಲ್ಲಿ ಮೊಂಡರಾಗಿ ದೇವರ ವಿರುದ್ಧವಾಗಿ ಗುಣುಗುಟ್ಟಿದಾಗ ಆತನು ಅವರೆಲ್ಲರನ್ನೂ ಅರಣ್ಯದಲ್ಲಿ ನಾಶ ಮಾಡಿಬಿಡಲು ನಿರ್ಧರಿಸಿದನು. ಆಗ ಮೋಶೆ ದೇವರ ಬಳಿ ತನ್ನ ಜನರಿಗಾಗಿ ಪ್ರಾರ್ಥಿಸದೇ ಹೋಗದಿದ್ದರೆ ಇಸ್ರಾಯೇಲ್ಯರೆಲ್ಲರೂ ಅಂದೇ ನಾಶವಾಗಿಹೋಗುತ್ತಿದ್ದರು (ಅರಣ್ಯ. 14:13–18,19) ಮೋಶೆಯ ಪ್ರಾರ್ಥನೆ ಕೇಳಿದ ದೇವರು ಮನಮರುಗಿ ನಿನ್ನ ಪ್ರಾರ್ಥನೆಯ ಮೇರೆಗೆ ಕ್ಷಮಿಸಿದ್ದೇನೆ ಅಂದನು (ಅರಣ್ಯ. 14:20).

ದೇವಮಕ್ಕಳೇ, ದೇಶಕ್ಕಾಗಿ ಅಬ್ರಹಾಮನಂತೆ ಮೋಶೆಯಂತೆ ಗೋಳಾಡಿ ಪ್ರಾರ್ಥಿಸಿರಿ. ಅದು ಕ್ರೈಸ್ತರಾದ ನಮ್ಮ ಮೇಲೆ ಬಿದ್ದ ಭಾರವಾಗಿದೆ ಎಂಬುದನ್ನು ಮರೆಯದಿರಿ.

*ನೆನಪಿಗೆ : ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು. ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು. ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿ ದ್ರೋಹಿಗಳೊಡನೆ ತನ್ನನ್ನೂ ಎಣಿಸಿಕೊಂಡು.... ಅವರಿಗಾಗಿ ವಿಜ್ಞಾಪನೆ ಮಾಡಿದನು (ಯೆಶಾ.53:12).*

ಡಿಸೆಂಬರ್ 29

# ಕರ್ತನ ಸ್ತಬ್ಧತೆ!

ಬೆಳಿಗ್ಗೆ : ಜೆಕರ್ಯ 9,10,11,12
ಸಂಜೆ : ಪ್ರಕ. 20

"ಉದ್ಧಾರಕನಾದ ಯಾವನೂ ಇಲ್ಲವೆಂದು ಕಂಡು ಸ್ತಬ್ಧನಾದನು. ಆತನ ಸ್ವಹಸ್ತವೇ ಆತನಿಗೆ ರಕ್ಷಣ ಸಾಧನವಾಯಿತು. ಆತನ ಧರ್ಮವೇ ಆತನಿಗೆ ಆಧಾರವಾಯಿತು" (ಯೆಶಾ.59:16).

ಕರ್ತನೇ ಸ್ತಬ್ಧನಾದನೆಂದರೆ ಅದು ನಮಗೆ ಒಂದು ದೊಡ್ಡ ಆಶ್ಚರ್ಯವೇ ಸರಿ. ಪರಲೋಕದ ಮಹಿಮೆಯಲ್ಲಿ ವಾಸಿಸುವ ಕರ್ತನನ್ನು ಸ್ತಬ್ಧಗೊಳಿಸುವಂಥ ಅಥವಾ ಆಶ್ಚರ್ಯಪಡಿಸುವಂಥದ್ದು ಒಂದೂ ಇಲ್ಲ. ಆದಾಗ್ಯೂ, ಆತನು ಪ್ರಾರ್ಥಿಸುವವನು ವಿಜ್ಞಾಪಿಸುವವನು ಯಾರೂ ಇಲ್ಲವೆಂದು ನೋಡಿ ಸ್ತಬ್ಧನಾದನು.

ಪ್ರಾರ್ಥನೆಗೆ ಹೇಳಲಸಾಧ್ಯವಾದ ಬಲ ಇದ್ದೂ ಕೂಡ ಅನೇಕ ಕ್ರೈಸ್ತರ ಜೀವಿತದಲ್ಲಿ ಸಾಕಾದಷ್ಟು ಪ್ರಾರ್ಥನೆಯೋ, ವಿಜ್ಞಾಪನೆಗಳೋ ಇರುವದಿಲ್ಲ. ಒಂದು ಸಂಖ್ಯಾ ಅಂಶದಂತೆ ಯೂರೋಪಿನಲ್ಲೂ, ಅಮೆರಿಕಾದಲ್ಲೂ ಐದು ನಿಮಿಷ ಕೂಡ ಪ್ರಾರ್ಥಿಸದ ಕ್ರೈಸ್ತರು ಹೇರಳವಾಗಿರುವರು. ಇದರಿಂದ ಸ್ತಬ್ದಗೊಂಡ ಕರ್ತನು ತಾನೇ ವಿಜ್ಞಾಪಿಸಬೇಕಾಯಿತು. ಇಂದಿಗೂ ಯೇಸುಕ್ರಿಸ್ತನು ನಮಗಾಗಿ ತಂದೆ ದೇವರ ಬಲ ಪಾರ್ಶ್ವದಲ್ಲಿ ಕುಳಿತು ವಿಜ್ಞಾಪಿಸುವನು. ಮಾತ್ರವಲ್ಲ ಪವಿತ್ರಾತ್ಮನೂ ನಮ್ಮೊಳಗೆ ಬಂದು ನಮಗಾಗಿ ವಿಜ್ಞಾಪನೆಯನ್ನು ಮಾಡುವನು. ಪ್ರಿಯರೇ, ನೀವು ಕರ್ತನೊಂದಿಗೆ ಸೇರಿ ವಿಜ್ಞಾಪನೆ ಮಾಡಿರಿ. ನೀವು ಪ್ರಾರ್ಥಿಸುವ ಪ್ರಾರ್ಥನೆಯೇ ನರಕಕ್ಕೆ ಹೋಗುವ ಒಬ್ಬ ಮನುಷ್ಯನನ್ನು ಪರಲೋಕದ ದಂಡೆಗೆ ಸೇರಿಸುವದು. ದೇವರ ಪ್ರಸನ್ನತೆಯನ್ನು ತರುವದು. ಕರ್ತನನ್ನು ಅಚ್ಚರಿಗೊಳಿಸುವ ಇನ್ನೊಂದು ಸಂಗತಿ ಉಂಟು. "ನನ್ನ ಜನರನ್ನು ವಿಮೋಚಿಸುವ ವರುಷವು ಒದಗಿತ್ತು. ನಾನು ನೋಡಲು ಸಹಾಯಕರು ಯಾರೂ ಇರಲಿಲ್ಲ. ಯಾವ ಬೆಂಬಲವೂ ಇಲ್ಲದ್ದನ್ನು ನೋಡಿ ಸ್ತಬ್ಧನಾದೆನು. ಆಗ ನನ್ನ ಸ್ವಹಸ್ತವೇ ನನಗೆ ರಕ್ಷಣ ಸಾಧನವಾಯಿತು. ನನ್ನ ರೌದ್ರವೇ ನನಗೆ ಆಧಾರವಾಯಿತು" (ಯೆಶಾ. 63:4–5) ಎಂದು ಕರ್ತನು ಹೇಳುತ್ತಾನೆ. ಹೊಸ ಒಡಂಬಡಿಕೆಗೆ ಬರುವಾಗ ಯೇಸುಕ್ರಿಸ್ತನು ಶತಾಧಿಪತಿಯಲ್ಲಿದ್ದ ನಂಬಿಕೆಯನ್ನು ನೋಡಿ ಆಶ್ಚರ್ಯಪಟ್ಟನು. ಇಸ್ರಾಯೇಲ್ಯರಲ್ಲಿ ಇಂಥಹ ನಂಬಿಕೆಯನ್ನು ನಾನು ನೋಡಲಿಲ್ಲ ಅಂದನು (ಮತ್ತಾಯ 8:10).

ದೇವಮಕ್ಕಳೇ, ನಿಮ್ಮನ್ನು ಪರೀಕ್ಷಿಸಿಕೊಂಡು ನೋಡಿರಿ. ನೀವು ಕರ್ತನ ಪಾದದಲ್ಲಿ ಕುಳಿತು ಇತರರಿಗೆ ವಿಜ್ಞಾಪಿಸಿರುವಿರಾ? ಕರ್ತನೊಂದಿಗೆ ನಿಂತ ಅನುಭವ ನಿಮಗೆ ಇದೆಯಾ? ನಿಮ್ಮ ನಂಬಿಕೆ ಆತನನ್ನು ಅಚ್ಚರಿಗೊಳಿಸಿದೆಯಾ? ಇಲ್ಲವೇ ಇನ್ನೂ ಅಪನಂಬಿಕೆಯಿಂದಿರುವಿರಾ? ಇಂದು ನಿಮ್ಮನ್ನು ನೋಡಿ ಪ್ರಪಂಚವು "ಇವನು ಕ್ರೈಸ್ತನು, ಕ್ರಿಸ್ತನೊಂದಿಗಿರುವನು. ಪ್ರಾರ್ಥಿಸುವವನು. ಕರ್ತನಿಗಾಗಿ ಪ್ರಕಾಶಿಸುವವನು" ಎಂದು ಆಶ್ಚರ್ಯಪಡಲಿ.

*ನೆನಪಿಗೆ : ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವದನ್ನು ಆ ಸಭಿಕರು ನೋಡಿ, ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು (ಅ.ಕೃ. 4:13).*



ಡಿಸೆಂಬರ್ 30

# ದೇವಸೇವಕರಿಗಾಗಿ ಪ್ರಾರ್ಥಿಸಿರಿ!

ಬೆಳಿಗ್ಗೆ : ಜೆಕರ್ಯ 13,14
ಸಂಜೆ : ಪ್ರಕ. 21

"ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ ಎಚ್ಚರವಾಗಿರ್ರಿ" (ಎಫೆ. 6:18).

ಇದು ಕರ್ತನು ಕೊಡುವ ನಾಲ್ಕನೆ ಪ್ರಾರ್ಥನಾ ಮನವಿಯಾಗಿದೆ. ದೇವ ಸೇವಕರ ರಕ್ಷಣೆಗಾಗಿ ಆಸಕ್ತಿಯಿಂದ ಪ್ರಾರ್ಥಿಸಿರಿ. ಸೇವೆಯಲ್ಲಿ ನಿಂತಿರುವ ಅವರು ರಣರಂಗದಲ್ಲಿ ಶತ್ರುವಿನ ಮುಂದೆ ನಿಂತಿರುವರು. ವ್ಯಾಧಿಗಳನ್ನೂ, ಮಂತ್ರ ತಂತ್ರಗಳನ್ನೂ, ಅಶುದ್ಧಾತ್ಮಗಳನ್ನೂ, ಮಾಂತ್ರಿಕರನ್ನೂ ಅವರು ಎದುರಿಸಿ ನಿಲ್ಲಬೇಕಾಗಿದೆ.

ಒಬ್ಬ ವಿಶ್ವಾಸಿಯ ಬೀಳುವಿಕೆಗಿಂತಲೂ ಒಬ್ಬ ದೇವಸೇವಕನ ಬೀಳುವಿಕೆ ಸೈತಾನನಿಗೆ ಮುಖ್ಯ. ಮಹಿಮೆಯಾಗಿ ಪ್ರಕಾಶಿಸುವ ಒಬ್ಬ ದೇವ ಸೇವಕನು ಬಿದ್ದರೆ, ಅವನ ಮೂಲಕ ಲಕ್ಷಾಂತರ ಜನರು ಕ್ರಿಸ್ತನ ಬಳಿಗೆ ಬರುವದನ್ನು ಸೈತಾನನು ತಡೆದು ನಿಲ್ಲಿಸಿಬಿಡುವನು. ದೇವಸೇವಕರ ಬೀಳುವಿಕೆಯಲ್ಲಿ ಕರ್ತನ ನಾಮವನ್ನು ದೂಷಣೆಗೆ ಒಳಪಡಿಸುವನು. ಅನೇಕರು ದೇವಸೇವಕನನ್ನು ತಲೆಯ ಮೇಲೆ ಕೂಡಿಸಿಕೊಂಡು ಅವನನ್ನು ಹೊಗಳಿ ಅವನ ಬೀಳುವಿಕೆಗೆ ದಾರಿ ಮಾಡಿಕೊಡುವರು. ಅವನು ಬಿದ್ದು ಹೋದರೆ ಅವನನ್ನು ತೆಗಳಿ ಕೊನೆಯವರೆಗೂ ತುಚ್ಛವಾಗಿ ಕಾಣುವರು. ಆದರೆ ಅವನಿಗಾಗಿ ಭಾರದಿಂದ ಕಣ್ಣೀರಿನಿಂದ ಪ್ರಾರ್ಥಿಸುವವರಿಲ್ಲ. ಅವನನ್ನು ಪ್ರೋತ್ಸಾಹಿಸಲು ಅವನಿಗಾಗಿ ವಿಜ್ಞಾಪಿಸಲು ಪ್ರಾರ್ಥನಾವೀರರಿಲ್ಲ. ಅಪೊ. ಪೌಲನು ತನಗಾಗಿ ಪ್ರಾರ್ಥಿಸಬೇಕೆಂದು ಪ್ರಾರ್ಥನಾಮನವಿಯನ್ನು ಬರೆದನು (ಎಫೆ. 6:19,20). ಒಮ್ಮೆ ಒಬ್ಬ ಮಿಷನರಿ ರಾತ್ರಿಯಲ್ಲಿ ಒಂದು ದಟ್ಟವಾದ ಕಾಡಿನ ಮಧ್ಯೆ ಒಂಟಿಯಾಗಿ ನಡೆದು ಹೋಗಬೇಕಾಯಿತು. ದುಷ್ಟ ಮೃಗಗಳ ಕಳ್ಳಕಾಕರರ ಭಯವಿತ್ತು. ಆ ಸೇವಕರಿಗಾಗಿ ಮೂವತ್ತು ಜನರು ಪ್ರಾರ್ಥಿಸುತ್ತಿದ್ದರು. ಅವರ ಆ ಪ್ರಯಾಣದಲ್ಲಿ ಯಾವ ವಿಪತ್ತು ಉಂಟಾಗದೆ ಸುರಕ್ಷಿತವಾಗಿ ಕಾಡನ್ನು ದಾಟಿಹೋದರು. ಕೆಲವು ದಿನಗಳ ನಂತರ ಆ ಸೇವಕರು ಆಸ್ಪತ್ರೆ ಸೇವೆಗೆಂದು ಹೋದಾಗ ಅಲ್ಲಿ ಒಬ್ಬ ಮನುಷ್ಯನು ಅವರನ್ನು ಕಂಡು "ಅಯ್ಯಾ, ನಾನು ಒಬ್ಬ ದರೋಡೆಕೋರನು. ಕೆಲವು ದಿನಗಳ ಹಿಂದೆ ರಾತ್ರಿಯಲ್ಲಿ ನೀವು ಕಾಡಿನ ಮಾರ್ಗವಾಗಿ ಒಂಟಿಯಾಗಿ ಹೋಗುತ್ತಿದ್ದದನ್ನು ಗಮನಿಸಿ ನಿಮ್ಮನ್ನು ಕೊಳ್ಳೆ ಹೊಡೆಯಲು ಬಂದೆನು. ಆಗ ನಿಮ್ಮೊಂದಿಗೆ ಮೂವತ್ತು ಜನರು ಹಿಂದೆ ಕತ್ತಿ ಹಿಡಿದು ನಿಮ್ಮ ಸುತ್ತಲೂ ನಡೆದುಹೋಗುವದನ್ನು ನೋಡಿ ಭಯದಿಂದ ಹಿಂದಿರುಗಿದೆ ಅಂದನು. ಹೌದು ಆ ಸೇವಕರಿಗಾಗಿ ಆ ವೇಳೆಯಲ್ಲಿ ಮೂವತ್ತು ವಿಶ್ವಾಸಿಗಳು ಪ್ರಾರ್ಥಿಸುತ್ತಿದ್ದರು.

ದೇವಮಕ್ಕಳೇ, ದೇವಸೇವಕರಿಗಾಗಿ, ಸೇವಾ ಸಂಸ್ಥೆಗಳಿಗಾಗಿ ಆಸಕ್ತಿಯಿಂದ ಪ್ರಾರ್ಥಿಸಿರಿ. ಅವರ ಸೇವೆಯನ್ನು ಬಲಪಡಿಸಿರಿ.

*ನೆನಪಿಗೆ : ನಾನು ಆತ್ಮದಿಂದ ಪ್ರಾರ್ಥಿಸುವೆನು. ಬುದ್ಧಿಯಿಂದಲೂ ಪ್ರಾರ್ಥಿಸುವೆನು. ಆತ್ಮದಿಂದ ಹಾಡುವೆನು. ಬುದ್ಧಿಯಿಂದಲೂ ಹಾಡುವೆನು (1 ಕೊರಿಂ. 14:15).*